ಕಲ್ಯಾಣ ಕರ್ನಾಟಕದ ಪ್ರತಿಬಿಂಬ.....

ವಿಜಯನಗರ ಜಿಲ್ಲಾ ಆವೃತ್ತಿ

ವಾರ್ತಾ ಲೋಕ

"VARTHA LOKA" Kannada Daily Morning News Paper, VIJAYNAGAR. Dist.: Vijaynagar

ಕನ್ನಡ ದಿನಪತ್ರಿಕೆ

ಕೊಪ್ಪಳ । ರಾಯಚೂರು । ಬಳ್ಳಾರಿ । ವಿಜಯನಗರ । ಯಾದಗಿರಿ । ಬೆಂಗಳೂರು । ಬೀದರ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಏಕಕಾಲಕ್ಕೆ ಪ್ರಕಾಶಿತ

ಸಂಪಾದಕರು: ಎಸ್. ವಿ. ಕುಲಕರ್ಣಿ ಜಿ.

ಸ್ಥಾನಿಕ ಸಂಪಾದಕರು: ಮೊಹಮ್ಮದ ಜಿಲಾನ ಜಿ.

ವಾರ್ತಾ ಲೋಕ
ಕನ್ನಡ ದಿನ ಪತ್ರಿಕೆ ಕಛೇರಿ
ರಾಜಾಸಾಬ ಕಂಪೌಂಡ್,
ಕುಲಾಯಪ್ಪ ಬಿಲ್ಡಿಂಗ್
ಎದುರುಗಡೆ, 1ನೇ ಕ್ರಾಸ್
ಪಟೇಲ್ ನಗರ,
ಹೊಸಪೇಟೆ
ಮೊ.ನಂ : 9482156289

E-mail ID : varthalokahpt@gmail.com

VOLUME : 01 | ISSUE : 280 | Saturday 29-03-2025 | RNI No.: KARKAN/2010/47633 | Page : 4+II | Mob. No. : 9482156289 | Price : ₹3/-

ಯತ್ನಾಳ್ ಉಚ್ಚಾಟನೆ

ಬಿಜೆಪಿಗೆ ಪಂಚಮಸಾಲಿ ಮತಗಳು ಕೈ ತಪ್ಪುವ ಭೀತಿ

ಬೆಂಗಳೂರು : ಪಕ್ಷ ವಿರೋಧಿ ಚಟುವಟಿಕೆ ಆರೋಪದ ಹಿನ್ನೆಲೆಯಲ್ಲಿ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದಲೇ ಆರು ವರ್ಷಗಳ ಕಾಲ ಉಚ್ಚಾಟನೆಗೊಂಡಿರುವ ಹಿಂದೂ ಫೈರ್ ಬ್ರ್ಯಾಂಡ್ ಖ್ಯಾತಿಯ ಬಿಜಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪ್ರಕರಣದಿಂದ ಬಿಜೆಪಿಗೆ ಭದ್ರ ಬುನಾದಿಯಾಗಿದ್ದ ಪಂಚಮಸಾಲಿ ಸಮುದಾಯದ ಮತಗಳು ಕೈ ತಪ್ಪುವ ಭೀತಿ ಎದುರಾಗಿದೆ.

ಹಳ್ಳಿಯಿಂದ ದಿಲ್ಲಿಯವರೆಗೂ ನಡೆಯಲಿರುವ ಯಾವುದೇ ಚುನಾವಣೆಯಲ್ಲಿ ಅಭ್ಯರ್ಥಿಗಳ ಸೋಲಿ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದ್ದ ಸಮುದಾಯವೇ ಪಂಚಮಸಾಲಿಗಳು. ವಿಶೇಷವಾಗಿ ಕಲ್ಯಾಣ ಕರ್ನಾಟ ಭಾಗದ ಬಳ್ಳಾರಿ, ರಾಯಚೂರು, ಕೊಪ್ಪಳ, ಬಾಗಲಕೋಟೆ, ಬೀದರ್ ವಿಜಾಪುರ, ಕಲಬುರಗಿ ವಿಜಯನಗರ ಹಾಗೂ ಕಲ್ಯಾಣ ಕರ್ನಾಟಕದ ಹಾವೇರಿ, ಧಾರವಾಡ, ಬೆಳಗಾವಿ ಮಧ್ಯ ಕರ್ನಾಟಕದ ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗಾ ಕೆಲವು ಭಾಗಗಳಲ್ಲಿ ಇವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ರಾಜ್ಯದಲ್ಲಿ ಬಿಜೆಪಿ– ಜೆಡಿಎಸ್ ಸಮಿಶ್ರ ಸರ್ಕಾರ ಅಧಿಕಾರ ವಿಚ್ಛೇಧನ ಹಂತಕ್ಕೆ ಬಂದು, ಅಂದು ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿ ಅವರು ಬಿ.ಎಸ್ ಯಡಿಯೂರಪ್ಪ ಅವರಿಗೆ ಅಧಿಕಾರ ಹಸ್ತಾಂತರ ಮಾಡದೇ ಇದ್ದಾಗ ವಚನ ಭ್ರಷ್ಟ ಆರೋಪದ ಮೇಲೆ ಬಿಜೆಪಿ ವೀಶಶೈವ ? ಲಿಂಗಾಯಿತ ಸಮುದಾಯದ ಮತಗಳನ್ನು ಸೆಳೆಯುವಲ್ಲಿ ಯಶಸ್ವೀಯಾಗಿತ್ತು.

ಆವರೆಗೂ ಒಬ್ಬ ಸಾಮಾನ್ಯ ನಾಯಕನಾಗಿದ್ದ ಯಡಿಯೂರಪ್ಪ, ಇದ್ದಕ್ಕೀದ್ದಂತೆ ವೀರಶೈವ ಸಮುದಾಯದ ಪ್ರಭಾವಿ ನಾಯಕನಾಗಿ ಹೊರ ಹೊಮ್ಮಿದ್ದು ಇದೇ ಕಾಲ ಘಟ್ಟದಲ್ಲಿ. ಅಂದಿನಿಂದ 2023 ರ ವಿಧಾನಸಭಾ ಚುನಾವಣೆವರೆಗೂ ಈ ಸಮುದಾಯ ಬಿಜೆಪಿಗೆ ಬೆಂಬಲವಾಗಿ ನಿಂತಿದ್ದು ಗುಟ್ಟಾಗಿ ಉಳಿದಿಲ್ಲ. ಆದರೆ, ಕೇಂದ್ರ ಬಿಜೆಪಿ ವರಿಷ್ಟರು ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದ ಮೇಲೆ ಇದೇ ಸಮುದಾಯ ಕಾಂಗ್ರೆಸ್ ಕಡೆ ಸ್ವಲ್ಪ ಮಟ್ಟದಲ್ಲಿ ವಾಲಿತ್ತು. ಆದರೂ ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಈ ಸಮುದಾಯದ ಮತಗಳನ್ನು ಸೆಳೆಯವಲ್ಲಿ ಪುನಃ ಯಶಸ್ವಿಯಾಗಿತ್ತು.

ಇದೀಗ ಪಂಚಮಸಾಲಿ ಸಮುದಾಯದ ಪ್ರಭಾವಿ ನಾಯಕನಾಗಿದ್ದ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಬಿಜೆಪಿಯ ಕೇಂದ್ರ ಶಿಸ್ತು ಸಮಿತಿ ಆರು ವರ್ಚಗಳ ಕಾಲ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದಲೇ ನಿರ್ದಾಕ್ಷಿಣ್ಯವಾಗಿ ಉಚ್ಚಾಟನೆ ಮಾಡಿದೆ. ಇದು ಬರುವ ದಿನಗಳಲ್ಲಿ ಕಮಲ ಪಕ್ಷಕ್ಕೆ ದುಬಾರಿಯಾಗಿ ಪರಿಣಮಿಸಲಿದಿಯೇ ಎಂಬ ಚರ್ಚೆ ರಾಜಕೀಯ ಪಡಸಾಲಿಯಲ್ಲಿ ಆರಂಭವಾಗಿದೆ.

ಯತ್ನಾಳ್ ಉಚ್ಚಾಟನೆಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡುಯೂರಪ್ಪ ಹಾಗೂ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ ವಿಜಯೇಂದ್ರ ಅವರುಗಳ ಚಿತಾವಣೆಯೇ ಪ್ರಮುಖ ಕಾರಣ ಎಂದು ಪಂಚಮಸಾಲಿ ಸಮುದಾಯದ ಜಯ ಮೃತ್ಯುಂಜಯ ಸ್ವಾಮೀಜಿ ನೇರವಾಗಿ ಆರೋಪ

ಮಾಡಿದ್ದಾರೆ. ಸಾಲದ್ದಕ್ಕೆ ನಮ್ಮ ಸಮುದಾಯದ ಶಾಸಕರು ರಾಜೀನಾಮೆ ನೀಡಿ ಬಿಜೆಪಿಯಿಂದ ಹೊರ ಬರವಂತೆಯೂ ಕರೆಕೊಟ್ಟಿದ್ದಾರೆ.

ಯತ್ನಾಳ್ ಅವರ ಉಚ್ಚಾಟನೆಯನ್ನು ಕೇಂದ್ರ ಬಿಜೆಪಿ ವರಿಷ್ಟರು ಹಿಂಪಡೆಯದಿದ್ದರೆ, ಇಡೀ ಪಂಚಮಸಾಲಿ ಸಮುದಾಯ ಬಿಜೆಪಿಗೆ ತಕ್ಕ ಪಾಠ ಕಲಿಸದೆ ಎಂದು ಎಚ್ಚರಿಕೆಯನ್ನು ಕೊಟ್ಟಿರುವುದು ಬಿಜೆಪಿಗೆ ನುಂಗಲಾರದ ಬಿಸಿತುಪ್ಪವಾಗಿ ಪರಿಣಮಿಸಿದೆ.

ಯತ್ನಾಳ್ ಉಚ್ಚಾಟನೆಯಿಂದ ರಾಜ್ಯ ಬಿಜೆಪಿಯಲ್ಲಿ ಎಲ್ಲವೂ ಸರಿಹೋಗಿ ಬಿಡುತ್ತಾ? ನಾಳೆಯಿಂದಲೇ ಬಣಮುಕ್ತ ಬಿಜೆಪಿ ಆಗಿ ಬಿಡುತ್ತಾ? ಹೀಗೆಂಬ ಪ್ರಶ್ನೆಗಳಿಗೆ ಇಲ್ಲ ಎಂಬ ಉತ್ತರಗಳೇ ರಾಜಕೀಯ ಪಡಸಾಲೆಯಿಂದ ಕೇಳಿ ಬರುತ್ತಿದೆ.

ಹೈಕಮಾಂಡ್ ತೀರ್ಮಾನ ರಾಜ್ಯದಲ್ಲಿ ಬಿಜೆಪಿಗೆ ಅನುಕೂಲಕರ ವಾತಾವರಣವನ್ನು ನಿರ್ಮಾಣ ಮಾಡಲಿದೆ ಎನ್ನುವುದನ್ನು ಒಪ್ಪಿಕೊಳ್ಳುವುದು ಕಷ್ಟವೇ.

ಸದ್ಯದ ಪರಿಸ್ಥಿತಿಯಲ್ಲಿ ರಾಜ್ಯದ ಹಿರಿಯ ನಾಯಕರು ಮತ್ತು ಬಣ ಬಡಿದಾಟದಲ್ಲಿ ತೊಡಗಿರುವ ನಾಯಕರನ್ನು ಒಂದೆಡೆ ಸೇರಿಸಿ ಭಿನ್ನಾಭಿಪ್ರಾಯಗಳನ್ನು ಸರಿಪಡಿಸುವ ಕೆಲಸವನ್ನು ಹೈಕಮಾಂಡ್ ನಾಯಕರು ಮಾಡಬಹುದಿತ್ತು.ಆದರೆ ಅದ್ಯಾವುದನ್ನೂ ಮಾಡದೆ ಉಚ್ಚಾಟನೆಯನ್ನು ಮಾಡಿ ಬಿಟ್ಟರೆ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿದಂತಾಯಿತಾ? ಈಗಾಗಲೇ ರಾಜ್ಯದಲ್ಲಿ ಬಿಜೆಪಿ ಕಥೆ ಊರು ಬಾಗಿಲಾಗಿದೆ. 2023ರ ವಿಧಾನ ಸಭಾ ಚುನಾವಣೆ ಬಳಿಕ ಪಕ್ಷ ದುರ್ಬಲವಾಗುತ್ತಾ ಹೋಗುತ್ತಿದೆ. ಜತೆಗೆ ನಾಯಕಗಳ ನಡುವಿನ ಅಸಮಾಧಾನಗಳು ಪಕ್ಷ ಸಂಘಟನೆಗೆ ಮಾರಕವಾಗುತ್ತಿದೆ. ಅದರಲ್ಲೂ ಬಿ.ವೈ.ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾದ ಮೇಲೆ ಹಲವು ಹಿರಿಯ ನಾಯಕರು ತಮಗೆ ರಾಜ್ಯಾಧ್ಯಕ್ಷ ಸ್ಥಾನ ಸಿಕ್ಕಿಲ್ಲ ಎಂಬ ಕಾರಣಕ್ಕೆ ಪಕ್ಷ ಸಂಘಟನೆಯಲ್ಲಿ ಆಸಕ್ತಿಯನ್ನೇ ಕಳೆದು ಕೊಂಡಿದ್ದಾರೆ.

2021ರಲ್ಲಿ ಬಿ.ಎಸ್.ಯಡಿಯೂರಪ್ಪ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಿ ಬಸವರಾಜ ಬೊಮ್ಮಾಯಿ ಅವರನ್ನು ಸಿಎಂ ಸ್ಥಾನಕ್ಕೆ ತಂದ ಹೈಕಮಾಂಡ್ ಆ ನಂತರದ ಬೆಳವಣಿಗೆಯಿಂದ ಬೆಚ್ಚಿ ಬಿದ್ದಿತು. 2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹೀನಾಯ ಸೋಲು ಕಂಡಾಗ ಎಚ್ಚೆತ್ತುಕೊಂಡ ಹೈಕಮಾಂಡ್ ಬಿ.ಎಸ್.ಯಡಿಯೂರಪ್ಪ ಅವರನ್ನು ಪಕ್ಷದಿಂದ ದೂರವಿಟ್ಟ ಪರಿಣಾಮ ರಾಜ್ಯದಲ್ಲಿ ಸೋಲು ಕಾಣುವಂತಾಯಿತು. ಹೀಗಾಗಿ ಪಕ್ಷದಿಂದ ದೂರ ಹೋದ ಲಿಂಗಾಯಿತ ಮತವನ್ನು ಮತ್ತೆ ಸೆಳೆದುಕೊಳ್ಳಲು ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ಬಿ.ವೈ.ವಿಜಯೇಂದ್ರ ಅವರಿಗೆ ರಾಜ್ಯಾಧ್ಯಕ್ಷ ಸ್ಥಾನವನ್ನು ನೀಡಲಾಯಿತು.

ಇಲ್ಲಿ ಆಗಿದ್ದೇ ಬೇರೆ ಹೈಕಮಾಂಡ್ ಏನು ಅಂದುಕೊಂಡಿತ್ತೋ ಅದು ಉಲ್ಟಾ ಆಗಿತ್ತು. ವಿಜಯೇಂದ್ರ ಅವರಿಗೆ ರಾಜ್ಯಾಧ್ಯಕ್ಷ ಸ್ಥಾನ ನೀಡಿದ್ದನ್ನು ಮೊದಲಿಗೆ ವಿರೋಧಿಸಿದವರೇ ಲಿಂಗಾಯತ ನಾಯಕರು. ಅವತ್ತು ರಾಜ್ಯಾಧ್ಯಕ್ಷ ಸ್ಥಾನಕ್ಕೆ ದೊಡ್ಡ ಮಟ್ಟದಲ್ಲಿ ಆಕಾಂಕ್ಷಿಗಳಿದ್ದರು. ಬಸನಗೌಡ ಪಾಟೀಲ್ ಯತ್ನಾಳ್, ಸಿ.ಟಿ.ರವಿ, ಸುನೀಲ್ ಕುಮಾರ್ ಹೀಗೆ ಹಲವರು ತೆರೆಮರೆಯ ಪ್ರಯತ್ನ ನಡೆಸಿದ್ದರು. ಆದರೆ ಯಾರಿಗೂ ಸೊಪ್ಪು ಹಾಕದ ಹೈಕಮಾಂಡ್ ಬಿ.ವೈ.ವಿಜಯೇಂದ್ರ ಅವರಿಗೆ ರಾಜ್ಯಾಧ್ಯಕ್ಷ ಪಟ್ಟವನ್ನು ನೀಡಿತ್ತು.

ಇದು ಹಲವು ಹಿರಿಯ ನಾಯಕರ ಅಸಮಾಧಾನಕ್ಕೆ ಕಾರಣವಾದರೂ ಕೆಲವರು ಹೊರಗೆ ತೋರಿಸಿ ಕೊಳ್ಳದೆ ಒಳಗೊಳಗೆ ಹಿಡಿಶಾಪ ಹಾಕಿಕೊಂಡು ಸುಮ್ಮನಾಗಿದ್ದರು.

ಬಸನಗೌಡ ಯತ್ನಾಳ್ ಮಾತ್ರ ಸುಮ್ಮನಾಗಲಿಲ್ಲ. ಅಧ್ಯಕ್ಷ ಸ್ಥಾನ ಸಿಗದಿದ್ದರೂ ವಿಧಾನ ಸಭೆಯಲ್ಲಿ ವಿರೋಧಪಕ್ಷದ ಸ್ಥಾನವಾದರೂ ಸಿಗುತ್ತದೆ ಎಂದು ನಂಬಿದ್ದರು. ಆದರೆ ಅದು ಕೂಡ ಸಿಗಲಿಲ್ಲ. ಆದರೆ ಅದಾಗಲೇ ಬಿಜೆಪಿ ಅಧಿಕಾರದಲ್ಲಿದ್ದಾಗಲೇ ಅವರಿಗೆ ಸಚಿವ ಸ್ಥಾನ ಕೊಡುತ್ತಾರೆ ಎಂದು ನಂಬಿದ್ದರು. ಆದರೆ ಕೊಟ್ಟಿರಲಿಲ್ಲ ಆ ಆಕ್ರೋಶವೂ ಅವರಲ್ಲಿ ಒಳಗೊಳಗೆ ಕುದಿಯುತ್ತಿತ್ತು.

ನಾನು ಅಟಲ್ ಬಿಹಾರಿ ವಾಜಪೇಯಿ ಅವರ ಸಂಪುಟದಲ್ಲಿ ಕೇಂದ್ರ ಸಚಿವನಾಗಿದ್ದವನು ನನ್ನನ್ನು ರಾಜ್ಯ ಸಂಪುಟಕ್ಕೆ ಪರಿಗಣಿಸಿಲ್ಲ ಎಂಬ ಕೋಪವಂತು ಇದ್ದೇ ಇತ್ತು. ಹೀಗಾಗಿ ಆಗಾಗ್ಗೆ ಸಮಯ ಸಿಕ್ಕಾಗಲೆಲ್ಲ ತಮ್ಮದೇ ಪಕ್ಷದ ಬಗ್ಗೆ ಮಾತನಾಡ ತೊಡಗಿದ್ದರು.

2500 ಕೋಟಿ ಕೊಟ್ಟರೆ ಸಿಎಂ ಆಗಬಹುದು ಎಂಬ ಅವರ ಮಾತು ಅವತ್ತು ಕಾಂಗ್ರೆಸ್ ಗೆ ಅಸ್ತ್ರವಾಗಿ ಸಿಕ್ಕಿತ್ತು. ಇವತ್ತಿಗೂ ಕಾಂಗ್ರೆಸ್ ನವರು ಬಿಜೆಪಿಯನ್ನು ಟೀಕಿಸುವಾಗಲೆಲ್ಲ ಆ ಮಾತನ್ನು ನೆನಪಿಸಿಕೊಳ್ಳುತ್ತಾರೆ. ಹೀಗಾಗಿ ಸ್ವತಃ ಯತ್ನಾಳ್ ಅವರೇ ಹಲವು ಸಂದರ್ಭಗಳಲ್ಲಿ ಬಿಜೆಪಿ ನಾಯಕರನ್ನು ಮಾತಿನಲ್ಲಿಯೇ ಬೆತ್ತಲೆ ಮಾಡಿದ್ದಾರೆ. ಅದರಲ್ಲೂ ಬಿ.ಎಸ್. ಯಡಿಯೂರಪ್ಪ ಮತ್ತು ಬಿ.ವೈ.ವಿಜಯೇಂದ್ರ ಅವರನ್ನು ಸಮಯ ಸಿಕ್ಕಾಗಲೆಲ್ಲಾ ತೆಗಳುತ್ತಲೇ ಬಂದಿದ್ದಾರೆ.

ಬಾಬು ಜಗಜೀವನ್ ರಾಮ್ ಹಾಗೂ ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆ

● ವಾರ್ತಾಲೋಕ ವಾರ್ತೆ

ಕೂಡ್ಲಿಗಿ: ಮಾರ್ಚ್ 28 : ತಳ ಸಮುದಾಯದ ಭದ್ರ ಬುನಾದಿಗೆ ಶ್ರಮಿಸಿದ ಇಬ್ಬರೂ ಮಹನೀಯರ ಜಯಂತಿ ಅರ್ಥಪೂರ್ಣ ಹಾಗೂ ಸಡಗರದಿಂದ ಆಚರಣೆ ಮಾಡುವುದು ಸರ್ವರ ಕರ್ತವ್ಯ ಎಂದು ತಹಸೀಲ್ದಾರ್ ವಿ. ಕೆ.ನೇತ್ರಾವತಿ ಹೇಳಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರ ತಾಲೂಕು ಆಡಳಿತದ ವತಿಯಿಂದ ಏ.5 ರಂದು ಬಾಬು ಜಗಜೀವನ್ ರಾಮ್ ಹಾಗೂ ಏ 14 ರಂದು ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಮಾಜಿ ಉಪ ಪ್ರಧಾನಿ ಬಾಬು ಜಗಜೀವನ್ ರಾಮ್ಅವರಜಯಂತಿಏ.5ರಂದುಪಟ್ಟಣದ ಪ್ರವಾಸಿ ಮಂದಿರದಲ್ಲಿ ಸರಳವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಗುವುದು. ಬಾಬು ಜೀ ಅವರು ಕೃಷಿ ಮಂತ್ರಿಗಳಾಗಿ, ಉಪ ಪ್ರಧಾನಿಯಾಗಿ ರೈತರ ಪರವಾಗಿ, ತಳ ಸಮುದಾಯದ ಪರವಾಗಿ ಮಾಡಿರುವ ಕಾರ್ಯಗಳನ್ನು ಪಟ್ಟಣದ ಅಂಗನವಾಡಿ, ಶಾಲಾ,ಕಾಲೇಜು ವಿಧ್ಯಾರ್ಥಿಗಳಿಗೆ ತಿಳಿಸುವ ಮೂಲಕ ಆವರ ಆದರ್ಶಗಳನ್ನು ಎಲ್ಲರೂ ಪಾಲನೆ ಮಾಡಬೇಕು ಎಂದು ತಿಳಿಸಿದರು. ಅದರಂತೆ ಏ.14 ರಂದು ಸಂವಿಧಾನದ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲು ಸಭೆಯಲ್ಲಿ ನಿರ್ಣಯ ತಗೆದುಕೊಳ್ಳಲಾಯಿತು. ಏ.14 ರಂದು ಪಟ್ಟಣದ ಅಂಬೇಡ್ಕರ್ ಕಾಲನಿಯಲ್ಲಿ ಬೆಳಿಗ್ಗೆ 9 ಕ್ಕೆ ಅಂಬೇಡ್ಕರ್ ಭಾವಚಿತ್ರಕ್ಕೆ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಪೂಜೆ ಮಾಡಿ ಮೆರವಣಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ವಿವಿದ ಮಂಗಳ ವಾದ್ಯಗಳ ಮೂಲಕ ಮೆರವಣಿಗೆ ಹೊರಟು, ಪಟ್ಟಣದ ಮದಕರಿ ವೃತ್ತದ ಮೂಲಕ ಚಂದ್ರಶೇಖರ ಆಜಾದ್ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮಆಯೋಜನೆಮಾಡಲಾಗುತ್ತದೆ ಎಂದು ಸಭೆಯಲ್ಲಿ ಚರ್ಚೆಮಾಡಲಾಯಿತು. ಹತ್ತು ಜನ ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹನೀಯರನ್ನು ಸನ್ಮಾನ ಮಾಡಲಾಗುವುದು ಎಂದು ತೀರ್ಮಾನಿಸಲಾಯಿತು. ಅಂಬೇಡ್ಕರ್ ಸಂಘದ ತಾಲೂಕು ಅಧ್ಯಕ್ಷ ಗುಣಸಾಗರ ಕೃಷ್ಣಪ್ಪ,ಪಪಂಅಧ್ಯಕ್ಷಕಾವಲಿಶಿವಪ್ಪನಾಯಕ, ತಾಪಂ ಇಒ ಕೆ.ನರಸಪ್ಪ, ಸಿಪಿಐ ಪ್ರಹ್ಲಾದ ಆರ್.ಚನ್ನಗಿರಿ,

ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್.ವೆಂಕಟೇಶ, ಸಮಾಜ ಕಲ್ಯಾಣಾಧಿಕಾರಿ ಷಾಯೀಕಾ ಆಹಮ್ಮದಿ, ದಲಿತ ಮುಖಂಡರಾದ ಎಸ್.ದುರುಗೇಶ್, ಹಿರೇಕುಂಬಳಗುಂಟೆ ಉಮೇಶ್, ಚಲವಾದಿ ಮಹಾಸಭಾದ ತಾಲೂಕು ಅಧ್ಯಕ್ಷ ಮಾರಪ್ಪ, ಬಂಡೆ ರಾಘವೇಂದ್ರ, ಡಿ.ಎಚ್.ದುರುಗೇಶ್, ಮಹೇಶ, ಮೂಗಪ್ಪ,ಕಾನಮಡುಗು ದುರುಗಪ್ಪ, ಪಕ್ಕೀರಪ್ಪ, ಗುಡೇಕೋಟೆ ನಾಗರಾಜ, ಅಜ್ಜಯ್ಯ, ಬಿ.ಟಿ.ಗುದ್ದಿ ಚಂದ್ರು, ಬಸಪ್ಪ, ಬ್ಯಾಳಿ ವಿಜಯಕುಮಾರ್ ಗೌಡ ಸೇರಿದಂತೆ ಅನೇಕರು ಇದ್ದರು.

ವರದಿ ಎಚ್ ಈರಣ್ಣ

ಗೆದ್ದಲಗಟ್ಟೆ: ಮಾ.30 ರಂದು ನೂತನ ದೇವಸ್ಥಾನ, ಕಳಸಾರೋಹಣ, ಮೂರ್ತಿ ಪ್ರತಿಷ್ಠಾಪನೆ ಉದ್ಘಾಟನೆ

● ವಾರ್ತಾಲೋಕ ವಾರ್ತೆ

ಕೂಡ್ಲಿಗಿ: ಮಾರ್ಚ್ 28 : ಸಮೀಪದ ಗೆದ್ದಲಗಟ್ಟೆ ಗ್ರಾಮದ ಆರಾಧ್ಯ ದೈವ ಕಾಲಭೈರವ ಶ್ರೀ ನುಂಕೆಮಲೆ ಸಿದ್ದೇಶ್ವರ ನೂತನ ದೇವಸ್ಥಾನದ ಕಳಸಾರೋಹಣ ಹಾಗೂ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ಮೇ 29 ಹಾಗೂ 30 ರಂದು ಎರಡು ದಿನಗಳ ಕಾಲ ಅತೀ ವಿಜೃಂಭಣೆಯಿಂದ ಜರುಗಲಿದೆ.

ಮಾರ್ಚ್ 30 ರಂದು ಭಾನುವಾರ ಸಂಜೆ 4–48ರಿಂದ 6–30 ರ ವರೆಗೆ ಬ್ರಾಹ್ಮಿ ಮುಹೂರ್ತ ಮೀನ ಲಗ್ನದಲ್ಲಿ ಕಾಲಭೈರವ ಶ್ರೀ ನುಂಕೆಮಲೆ ಸಿದ್ದೇಶ್ವರ ಸ್ವಾಮಿ ವಿಗ್ರಹ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ನಡೆಯಲಿದೆ.

ದೇವರಗುಡ್ಡದ ಕಾಲಭೈರವ ಶ್ರೀ ನುಂಕೆಮಲೆ ಸಿದ್ದೇಶ್ವರ ಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಗೋರಕ್ ನಾಥ್ ದೇವಸ್ಥಾನದ 114ನೇ ಪಟ್ಟಾದ್ಯಕ್ಷ ರಾಜಯೋಗಿ ಗುರು ಶ್ರೀ ಮಂಗಳನಾಥಜೀ ಮಹಾರಾಜ ಗುರುಜೀ ದಿವ್ಯ ಸಾನಿಧ್ಯ ವಹಿಸಲಿದ್ದಾರೆ.ಸಮುಖ ಪೌರೋಹಿತ್ಯವನ್ನು ಶ್ರೀ ವೇ॥ಮೂ॥ ಗೆದ್ದಲಗಟ್ಟೆ ಮಠದ ನಾಗಲಿಂಗ ಸ್ವಾಮಿಗಳು ಮತ್ತು ಅವರ ತಂಡ ಪೌರೋಹಿತ್ಯವನ್ನು ನೆರವೇರಿಸಲಿದ್ದಾರೆ.

ಮಾರ್ಚ್ 28 ರಂದು ಶುಕ್ರವಾರ ಸಂಜೆ 9–30 ಕ್ಕೆ ಸರಿಯಾಗಿ ಗ್ರಾಮದ ಶ್ರೀ ಬಸವೇಶ್ವರ ಯುವಕ ನಾಟ್ಯ ಕಲಾ ಸಂಘದವರಿಂದ ಕಾಮ ಲೋಕದಲ್ಲಿ ಕವಿಯ ಕಂಡ ಕನಸು ಎಂಬ ಸುಂದರ ಸಾಮಾಜಿಕ ನಾಟಕ ಪ್ರದರ್ಶನವಿದ್ದು,ಮಾರ್ಚ್ 29 ರಂದು ಶನಿವಾರ ಸಂಜೆ ಗೋಧೂಳಿ ಲಗ್ನದಲ್ಲಿ ಸ್ಥಳ ಶುದ್ಧಿ,ತತ್ವಶುದ್ಧಿ ಪಂಚಗವ್ಯ ಪ್ರೋಷಣೆ.ಮಾರ್ಚ್ 30 ರಂದು ಭಾನುವಾರ ಬೆಳಿಗ್ಗೆ ಗಂಗಾ ಕಳಶ ತರುವುದು, ಪ್ರಧಾನ ಕಳಸ ಸ್ಥಾಪನೆ,ಸ್ವಸ್ತಿಪುಣ್ಯಹ ಉಮಾಮಹೇಶ್ವರ

ಪೂಜೆ,ಗುಣ ಹೋಮ, ನವಗ್ರಹ ಪೂಜೆ,ಪರಿವಾರ ದೈವಗಳ ಪೂಜೆ,ರುದ್ರಹೋಮ, ಶಾಂತಿ ಹೋಮ ಅಭಿಷೇಕ, ಅಲಂಕಾರ ಪೂಜೆ, ಪೂರ್ಣಾಹುತಿ, ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ಇರುತ್ತದೆ.ಅದ್ದರಿಂದ ತಾಲೂಕಿನ ಸಕಲ ಸದ್ಭಕ್ತರು ಸಹಕರಿಸಿ ಹೆಚ್ಚಿನ ಸಂಖ್ಯೆಯಲ್ಲಿ ಈ ಎಲ್ಲಾ ಪೂಜಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಸಮಸ್ತ ಗೆದ್ದಲಗಟ್ಟೆ ಗ್ರಾಮದ ದೈವಸ್ಥರು, ಗ್ರಾಮಸ್ಥರು ಭಕ್ತಾದಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

ವರದಿ ಎಚ್ ವೀರಣ್ಣ

ತಾಯಿತನ ಹೆಣ್ಣಿಗೆ ನೈಸರ್ಗಿಕವಾದ ಪ್ರಕ್ರಿಯೆ: ಜಿಲ್ಲಾ ಎಸ್ ಪಿ ಡಾಕ್ಟರ್ ವಿ ಜೆ ಶೋಭಾರಾಣಿ

AIKKMS
SKM
ಪಂಜಾಬ್ ರೈತರ ಮೇಲಿನ ಪೊಲ

ಜಗಜೀವನರಾಂ ಹಾಗೂ ಸಂವಿಧಾನ ಶಿಲ್ಪಿ ಅಂಬೇಡ್ಕರ ಅವರ ಜಯಂತಿ ಅರ್ಥಪೂರ್ಣ ಆಚರಣೆಗೆ ತಿಕೋಟಾ ತಾಲೂಕು ಆಡಳಿತ ನಿರ್ಧಾರ

ವಿಜಯಪುರ : ತಿಕೋಟಾ ತಾಲೂಕ ಆಡಳಿತದ ವತಿಯಿಂದ ಏ.5ರಂದು ಡಾ.ಬಾಬು ಜಗಜೀವನರಾಂ ಹಾಗೂ ಏ. 14 ರಂದು ಸಂವಿಧಾನ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ ಅವರ ಜಯಂತ್ಯೋತ್ಸವ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಹಾಗೂ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಯಿತು.

ತಿಕೋಟಾ ತಾಲೂಕಿನ ತಹಸೀಲ್ದಾರ ಸುರೇಶ ಚಾವಲರ ಅವರ ಅಧ್ಯಕ್ಷತೆಯಲ್ಲಿ ಮಾರ್ಚ್ 24 ರಂದು ತಹಶೀಲ್ದಾರ ಅವರ ಕಾರ್ಯಾಲಯದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಈ ಮಹನೀಯರ ಜಯಂತಿ ಕಾರ್ಯಕ್ರಮಗಳಿಗೆ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಹಾಗೂ ತಾಲೂಕಿನ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಅವರು ಕೋರಿದ್ದಾರೆ.

ಸಭೆಯಲ್ಲಿ ತಾಲೂಕಾ ಪಂಚಾಯತಿಯ ಕಾರ್ಯ ನಿರ್ವಾಹಣಾಧಿಕಾರಿ ಬಿ.ಆರ್ ಬಿರಾದಾರ, ಪಟ್ಟಣ ಪಂಚಾಯತಿ ಅಧಿಕಾರಿ ರಘು ನಡುವಿನಮನಿ ಸೇರಿದಂತೆ ತಾಲೂಕಾ ಮಟ್ಟದ ಅಧಿಕಾರಿಗಳು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಬಿ.ಜೆ ಇಂಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶರಣರ ವಿಚಾರಧಾರೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ:ಪೂಜ್ಯ ಜ್ಞಾನಾನಂದ ಸ್ವಾಮಿಗಳು ಕರೆ

ವಿಜಯಪುರ : ವಚನಗಳಲ್ಲಿ ಆಧ್ಯಾತ್ಮ ಮತ್ತು ತಾತ್ವಿಕ ವಿಚಾರಗಳಿಗೆ ಹೆಚ್ಚಿನ ಮಹತ್ವವಿದೆ ಮತ್ತು ಅವು ಇಂದಿಗೂ ಸರ್ವಕಾಲಿಕ ಎಂದು ವಿಜಯಪುರದ ಜ್ಞಾನ ಯೋಗಾಶ್ರಮದ ಜ್ಞಾನಾನಂದ ಸ್ವಾಮೀಜಿಗಳು ಹೇಳಿದರು.

ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್ ಬಿ ಕಲಾ ಮತ್ತು ಕೆ ಸಿ ಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆ ಹಾಗೂ ಕನ್ನಡ ವಿಭಾಗದ ಸಯುಕ್ತಾಶ್ರಯದಲ್ಲಿ ಅಲ್ಲಮ್ಮ ಪ್ರಭುದೇವರ ಜಯಂತಿಯ ಅಂಗವಾಗಿ ಹಾಗೂ ದಿವಂಗತ ಕೃಷ್ಣಭಾಯಿ ಹನುಮಂತ ಬಿದರಿ, ಲಿಂ. ಶಿವಲಿಂಗಮ್ಮ ಪರಪ್ಪ ಸಜ್ಜನ, ಲಿಂ ಶಾಂತಾಬಾಯಿ ಮಲ್ಲೇಶಪ್ಪ ಸಜ್ಜನ, ಕೋರವಾರ ಶಂಕರಗೌಡ ಶರಣಪ್ಪಗೌಡ ಪಾಟೀಲ ಇವರ ದತ್ತಿ ಸ್ಮರಣೆ ಕಾರ್ಯಕ್ರಮ ದತ್ತಿ ದಾಸೋಹಿಗಳಾದ ಪ್ರೊ ಆರ್ ಎಚ್ ಬಿದರಿ ಮತ್ತು ಪ್ರೊ ಜಯಶ್ರೀ ಸಜ್ಜನ ಅವರ ದತ್ತಿ ಕಾರ್ಯಕ್ರಮದಲ್ಲಿ "ಅಲ್ಲಮಪ್ರಭು ಅನುಭಾವ" ಎಂಬ ವಿಷಯದ ಕುರಿತು ಮುಖ್ಯಅತಿಥಿಗಳಾಗಿ ಮಾತನಾಡಿದ ಅವರು, ಅಲ್ಲಮಪ್ರಭು, ಬಸವಣ್ಣ, ಶರಣ, ಶರಣೆಯರು ಭಕ್ತಿ ವೈರಾಗ್ಯವನ್ನು ಬೋಧಿಸಿದವರು.

ಅಂತರಂಗ ಬಹಿರಂಗವನ್ನು ಶೋಧಿಸಲು ಯತ್ನಿಸಿದವರು. ಆದರೆ ಇಂದಿನ ವಿದ್ಯಾರ್ಥಿಗಳು ಸದಾ ಮೊಬೈಲ್‌ನಲ್ಲಿಯೇ ಮುಳುಗಿದ್ದಾರೆ. ಅವರ ತತ್ವಗಳು ಮತ್ತು ವಿಚಾರಧಾರೆಗಳನ್ನು ಗ್ರಹಿಸುವ ಆಸಕ್ತಿ ಇಲ್ಲದಂತಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು ಜೀವನದಲ್ಲಿ ಕಲಿಕೆಯ ಹಂತದಲ್ಲಿ ದೃಢ ಮನಸ್ಸಿನಿಂದ, ಏಕಾಗ್ರತೆಯಿಂದ, ಕೇವಲ ಜ್ಞಾನದ ಹಂಗಿರಬೇಕು ಮನ್ನಸ್ಸನ್ನು ಏಚಲಿತಗೊಳಿಸದೆ ನಿಮ್ಮ ಅಮೂಲ್ಯವಾದ ಸಮಯವನ್ನು ಸರಿಯಾಗಿ ಬಳಿಸಿಕೊಳ್ಳಬೇಕು. ಸನ್ಮಾರ್ಗದಲ್ಲಿ ಸಾಗುವುದಲ್ಲದೆ ಮಹಾನ್ ಶರಣರ ವ್ಯಕ್ತಿತ್ವ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಮಾಜದಲ್ಲಿ ಒಳ್ಳೆಯ ವಿಚಾರಧಾರೆಗಳನಿಟ್ಟುಕೊಂಡು ಜೀವನ ನಡೆಸಬೇಕು ಎಂದು ತಿಳಿಸಿದರು.

ಈ ವೇಳೆಯಲ್ಲಿ ಡಾ.ಉಷಾದೇವಿ ಹಿರೇಮಠ ಅವರುಆಶಯಾನುಡಿಗಳನ್ನಾಡಿಶರಣರವಚನ ಅವರ ವಿಚಾರಗಳು ಅರ್ಥೈಸಿಕೊಳ್ಳಬೇಕು. ಅದನ್ನು ಅರ್ಥೈಸಿಕೊಂಡು ಜೀವನದಲ್ಲಿ ಅಳವಡಿಸಿದ್ದಲ್ಲಿಜೀವನಸಾರ್ಥಕಗೊಳ್ಳುತ್ತದೆ ಎಂದರು.

ಈ ಸಂದರ್ಭದಲ್ಲಿ ಪ್ರಾಚಾರ್ಯೆ ಡಾ. ಆರ್. ಎಂ ಮಿರ್ದೆ ಮಾತನಾಡಿ, ಸಮಾಜದಲ್ಲಿ ನಾವೆಷ್ಟೇ ಎತ್ತರ, ಸ್ಥಾನಕ್ಕೇರಲಿ ನಮ್ಮ ಪೂರ್ವಜರ ಮತ್ತು ನಮ್ಮ ಕುಟುಂಬದ ಹಿರಿಯ ಜೀವಿಗಳನ್ನು ಮರೆಯಬಾರದು. ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ಮುನ್ನಡೆಯಬೇಕಾಗಿದ.? ಅದಕ್ಕಾಗಿಯೇ ಇಂತಹ ಶರಣರ ದತ್ತಿ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಅವರ ವಿಚಾರಧಾರೆಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಜಂಬೂನಾಥ ಕಂಚ್ಯಾಣಿ ಮಾತನಾಡಿದರು.

ಈ ಸಂದರ್ಭದಲ್ಲಿ ದಾಸೋಹಿಗಳು, ವಕೀಲರು ಡಿ. ಎಸ್ ಪಾಟೀಲ ಮಾತನಾಡಿದರು. ಈ ಸಂದರ್ಭದಲ್ಲಿ ದಾಸೋಹಿಗಳು ನಿವೃತ್ತ ಪ್ರಾಧ್ಯಾಪಕರು ಪ್ರೊ.ಆರ್ ಹೆಚ್ ಬಿದರಿ ದಂಪತಿಗಳು, ಪ್ರೊ.ಶ್ರೀಧರ ಜೋಷಿ, ಪ್ರೊ.ಅಮೀನ್ ಲೇನ್, ಪ್ರೊ.ರಾಜೇಶ್ವರಿ ಮರಾಣಿಕ್, ಅಕ್ಷಯ ಜನಾಯ, ಭೀಮಸಿ ಮದರಕಂಡಿ, ಮಲಿಕ್ ಜಮಾದಾರ ಮಹಾವಿದ್ಯಾಲಯ ಬೋಧಕ, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಡಾ.ಶ್ರೀನಿವಾಸ ದೊಡ್ಡಮನಿ ಸ್ವಾಗತಿಸಿದರು, ಪ್ರೊ.ರೇಣುಕಾ ಕಮತರ ನಿರೂಪಿಸಿದರು. ಶರಣ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಆಯ್ ಡಿ. ತೊಂಡಿಕಟ್ಟಿ ವಂದಿಸಿದರು.

ವಿದ್ಯುತ್ ಶಾರ್ಟ್ ಸರ್ಕ್ಯೂಟ್: 15 ವಾಹನಗಳು ಭಸ್ಮ

ವಿಜಯಪುರ : ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದ ಬೆಂಕಿ ಅವಘಡ ಸಂಭವಿಸಿ15 ವಾಹನಗಳು ಭಸ್ಮವಾಗಿರುವ ಘಟನೆ ನಗರದ ಗಾಂಧಿಚೌಕ್ ಪೊಲೀಸ್ ಠಾಣೆಯ ಹಿಂಭಾಗದ ಆವರಣದಲ್ಲಿ ಸೋಮವಾರ ಮಧ್ಯಾಹ್ನ ನಡೆದಿದೆ.

ಅಪಘಾತಹಾಗೂ ಇತರೆ ಪ್ರಕರಣಗಳಲ್ಲಿ ಜಪ್ತಿಮಾಡಿದ ವಾಹನಗಳು ಬೆಂಕಿ ಕೆನ್ನಾಲಿಗೆಗೆ ಸುಟ್ಟು ಕರಕಲಾಗಿದ್ದು, ವಾಹನಗಳ ಟೈರ್ ಗಳು ಸ್ಫೋಟಗೊಂಡಿವೆ. ದಟ್ಟನೆ ಹೊಗೆ ಕಂಡು ಜನರು ಆತಂಕಕ್ಕೀಡಾಗಿದ್ದರು. ಸ್ಥಳಕ್ಕೆ ಅಗ್ನಿಶಾಮಕ ದಳ ಸಿಬ್ಬಂದಿ ಆಗಮಿಸಿ, ಬೆಂಕಿ ನಂದಿಸಲು ಹರಸಾಹಸ ಪಟ್ಟರು. ಬಹಳ ಹೊತ್ತಿನ ನಂತರ ಬೆಂಕಿ ನಂದಿಸಲು ಸಾಧ್ಯವಾಯಿತು.

ಗಾಂಧಿಚೌಕ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಹವಾಮಾನ: ರೈತರಿಗಾಗಿ ಜಾಗೃತಿ ಕಾರ್ಯಕ್ರಮ

ವಿಜಯಪುರ : ಗ್ರಾಮೀಣ ಕೃಷಿ ಹವಾಮಾನ ಸಲಹಾ ಸೇವಾ ಯೋಜನೆ ಅಡಿಯಲ್ಲಿ "ಹವಾಮಾನ ಮುನ್ಸೂಚನೆ ಹಾಗೂ ಹವಾಮಾನ ಆಧಾರಿತ ಕೃಷಿ" ಕುರಿತು ರೈತರಿಗಾಗಿ ಜಾಗೃತಿ ಕಾರ್ಯಕ್ರಮವನ್ನು ನಗರದ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಕೃಷಿಹವಾಮಾನಶಾಸ್ತ್ರಜ್ಞ ಡಾ. ಜಿ.ಎಸ್.ಯಡಹಳ್ಳಿ ಈವರ್ಷದ ಹವಾಮಾನ ದಿನಾಚರಣೆಯನ್ನು "ಮುನ್ಸೂಚನೆಗಳ ಮುನ್ನಚ್ಚರಿಕೆಯ ಅಂತರವನ್ನು ಒಟ್ಟಾಗಿ ಕಡಿಮೆಗೊಳಿಸುವುದು" ಘೋಷ್ಯ ವಾಕ್ಯದೊಂದಿಗೆ ಆಚರಿಸಲಾಯಿತು.

ಭಾರತೀಯ ಹವಾಮಾನ ಇಲಾಖೆಯಿಂದ ಬರುವ ಹವಾಮಾನ ಮುನ್ಸೂಚನೆಗಳ ಆಧಾರದ ಮೇಲೆ ಪ್ರತಿ ಮಂಗಳವಾರ ಮತ್ತು ಶುಕ್ರವಾರಕ್ಕೊಮ್ಮೆ ರೈತರಿಗೆ ಹವಾಮಾನ ಮುನ್ಸೂಚನೆಗಳು ಹಾಗೂ

ಹವಾಮಾನ ಆಧಾರಿತ ಕೃಷಿ ಸಲಹೆಗಳನ್ನು ನೀಡಲಾಗುವುದೆಂದರು.

ಈಸಲಹೆಗಳನ್ನುರೈತರುಅಳವಡಿಸಿಕೊಂಡು ಹೆಚ್ಚಿನ ಆದಾಯವನ್ನು ಪಡೆಯಬಹುದು ಮತ್ತು ವ್ಯವಸಾಯಕ್ಕೆ ತಗಲುವ ಖರ್ಚನ್ನು ಕಡಿಮೆಗೊಳಿಸಬಹುದೆಂದರು.

ಮುಖ್ಯ ಅತಿಥಿ ಡಾ. ಆರ್. ಬಿ. ಜೊಳ್ಳಿ ಮಾತನಾಡಿ, ಹವಾಮಾನ ಮುನ್ಸೂಚನೆಗಳನ್ನು ವಿಜ್ಞಾನಿಗಳಿಂದ ಪಡೆದುಕೊಂಡು ಅದಕ್ಕನುಗುಣವಾಗಿ ಹವಾಮಾನ ಆಧಾರಿತ ವೈಜ್ಞಾನಿಕ ಕೃಷಿ ಚಟುವಟಿಕೆಗಳನ್ನು ಮಾಡುವದರಿಂದ, ರೈತರಿಗೆ ಆಗುವ ಕಷ್ಟಗಳನ್ನು ತಪ್ಪಿಸಬಹುದು.

ಹಾಗೆಯೇ, ಇವತ್ತಿನದಿನವಿಶ್ವಜಲದಿನಾಚರಣೆ ಇರುವದರಿಂದ ರೈತರು ಕೃಷಿಯಲ್ಲಿ ನೀರನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ ಸಹ ಸಂಶೋಧನಾ ನಿರ್ದೇಶಕ ಡಾ. ಎಸ್. ಬಿ. ಜಗ್ಗಿನವರ ಮಾತನಾಡಿ, ಹವಾಮಾನ ವೈಪರಿತ್ಯದಿಂದ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದ್ದು, ಅವುಗಳನ್ನು ಸರ್ಮಪಕವಾಗಿ ನಿರ್ವಹಿಸಲು ಸಜ್ಜಾಗಬೇಕು ಹಾಗೂ ನಮ್ಮ ಸಂಶೋಧನಾ ಕೇಂದ್ರದಿಂದ ಮತ್ತು ಈ ತರಬೇತಿಯಲ್ಲಿ ನೀಡುವಂತಹ ಹವಾಮಾನ ಮುನ್ಸೂಚನೆಗಳು ಹಾಗೂ ಕೃಷಿ ಸಲಹೆಗಳ ಮಾಹಿತಿಯನ್ನುಬಳಸಿಕೊಂಡುಕೃಷಿಯನ್ನು ಮಾಡಲು ತಿಳಿಸಿದರು.

ಜಾಗತಿಕ ಹವಾಮಾನ ದಿನಾಚರಣೆಯ ಮೂಲ ಉದ್ದೇಶಗಳು ಹಾಗೂ ಹವಾಮಾನ ವೈಪರಿತ್ಯವನ್ನು ತಗ್ಗಿಸಲು ಎಲ್ಲರೂ ಒಟ್ಟಾಗಿ ಶ್ರಮಿಸೋಣ ಎಂದು ಹೇಳಿದರು.

ತರಬೇತಿ ಕಾರ್ಯಕ್ರಮದಲ್ಲಿ ಡಾ. ಎಸ್. ಬಿ. ಪಾಟೀಲ ಮಳೆಯಾಶ್ರಿತದಲ್ಲಿ ಮಣ್ಣು ಮತ್ತು ನೀರಿನ ಸಂರಕ್ಷಣೆ, ಡಾ. ಎಸ್. ಎಸ್. ಕರಭಂಟನಾಳ ವಿವಿಧ ಬೆಳೆಗಳಲ್ಲಿ ಕೀಟಗಳ ನಿರ್ವಹಣೆ, ಡಾ. ಎಸ್. ಎಮ್. ವಸ್ತ್ರದ ವಿವಿಧ ಬೆಳೆಗಳಲ್ಲಿ ರೋಗಗಳ ನಿರ್ವಹಣೆ, ಡಾ. ಜಿ. ಆರ್. ಹಿರೇಮಠ ಹವಾಮಾನ ಮುನ್ಸೂಚನೆಗಳ ಅಪ್ಲಿಕೇಶನಗಳ ಅಳವಡಿಸಿಕೊಳ್ಳುವ ಕುರಿತು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ನಿರೂಪಣೆ, ಸ್ವಾಗತಹಾಗೂ ವಂದನಾರ್ಪಣೆಯನ್ನು ಡಾ. ಜಿ. ಎಸ್. ಯಡಹಳ್ಳಿ ನಡೆಸಿಕೊಟ್ಟರು.

ಪೊಲೀಸ ಠಾಣೆಯ ಕಟ್ಟಡಕ್ಕೆ ಭೂಮಿ ಪೂಜೆ

ಆಲಮೇಲ : ದಿನದ 24ಗಂಟೆಯೂ ಸೇವೆ ಸಲ್ಲಿಸುತ್ತಿರುವ ಹಾಗೂ ಸಾರ್ವಜನಿಕರಿಗೆ ರಕ್ಷ ಣೆ ನೀಡುತ್ತಿರುವ ಪೊಲೀಸರ ಆರೋಗ್ಯ ಮತ್ತು ಹಿತ ಕಾಪಾಡುವುದು ಸರಕಾರದ ಜವಾಬ್ದಾರಿ. ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ಎಲ್ಲ ಪೊಲೀಸ್ ಠಾಣೆ ನಿರ್ಮಾಣ ಮತ್ತು ಪೊಲೀಸ್ ವಸತಿ ಗೃಹಗಳಿಗೆ ಹಣ ಬಿಡುಗಡೆ ಮಾಡಿದೆ ಎಂದರು.

ಪಟ್ಟಣದ ಪೊಲೀಸ ಠಾಣೆಯ ಕಟ್ಟಡದ ಭೂಮಿ ಪೂಜೆಯನ್ನು ನೇರವೇರಿಸಿ ಮಾತನಾಡಿದರು. ನಂತರ ಅವರು ಪೊಲೀಸ ಠಾಣೆಯ ಕಟ್ಟಡಕ್ಕೆ 88 ಲಕ್ಷ ರೂಪಾಯಿ ಬಿಡುಗಡೆಯಾಗಿದೆ ಎಂದರು.

ಆಲಮೇಲ ಪೊಲೀಸ ಠಾಣೆಯ ಪಿಎಸ್‌ಐ ಅರವಿಂದ ಅಂಗಡಿ ಮಾತನಾಡಿ ಆಲಮೇಲ ಪೊಲೀಸ ಠಾಣೆಯು ಶಿಥಿಲಾವಸ್ಥೆಗೆ ತಲುಪಿದ್ದ ಕಟ್ಟಡದಲ್ಲಿ ಪೊಲೀಸರು ಕರ್ತವ್ಯ ನಿರ್ವಹಿಸುವುದು ಕಡತಗಳ ಸಂರಕ್ಷಣೆ ತುಂಬಾ ಕಷ್ಟವಾಗಿತ್ತು ನೂತನ ಕಟ್ಟಡವಾದರೇ ತುಂಬಾ ಪ್ರಯೋಜನವಾಗಲಿದೆ. ಈ ಸಂದರ್ಭ ಪಪಂ ಅಧ್ಯಕ್ಷ ಸಾಧೀಕಸುಂಬಡ, ಮುಖ್ಯಾಧಿಕಾರಿ ಸುರೇಶ ನಾಯಕ, ಪ. ಪಂ ಸದಸ್ಯರಾದ ಸಂಜೀವಕುಮಾರ ಯಂಟಮಾನ, ಚಂದು ಹಳೇಮನಿ, ಭಾಗ್ಯವಂತ ಆಲಮೇಲಕರ, ರಾಹುಲ ಯಂಟಮಾನ, ಗ್ಯಾರೆಂಟಿ ಅನುಷ್ಠಾನ ತಾಲ್ಲೂಕಾಧ್ಯಕ್ಷ ಅಶೋಕ ಕೊಳಾರಿ, ಸಂತೋಷ ಜರಕರ, ಮುಖಂಡರಾದ ವೀರಭದ್ರ ಕತ್ತಿ, ಸೋಮನಾಥ ಮೇಲಿನಮನಿ, ಯಲ್ಲಪ್ಪ ಬುರುಡ, ಮಲ್ಲು ಅಚಲೇರಿ, ಶ್ರೀಮಂತ ಹಿರೇಗೌಡರ, ಅಯೂಬ್ ಸುಂಬಡ, ವಹಾಬ್ ಸುಂಬಡ, ಮಹಿಬೂಬ ಮಸಳಿ ಮತ್ತಿತರರು ಇದ್ದರು.

ವಿದ್ಯಾರ್ಥಿಗಳು ಜೀವನದ ಗುರಿಯನ್ನು ಇಟ್ಟುಕೊಂಡು ಅಧ್ಯಯನಶೀಲರಾಗಬೇಕು: ಸಚಿನ ಕುಳಗೇರಿ

ವಿಜಯಪುರ : ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಸಿಇಟಿ ಮತ್ತು ನೀಟ್ ತರಬೇತಿಯನ್ನು ನೀಡುವ ಕಾರ್ಯವನ್ನು ಎಬಿವಿಪಿ ಮಾಡಿಕೊಂಡು ಬರುತ್ತಿದೆ ಎಂದು ಎಬಿವಿಪಿಯ ರಾಜ್ಯ ಕಾರ್ಯದರ್ಶಿ ಸಚಿನ ಕುಳಗೇರಿ ಹೇಳಿದರು.

ನಗರದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆಯುತ್ತಿರುವ ಉಚಿತ ಸಿಇಟಿ ನೀಟ್ ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಆಧುನಿಕ ಜಗತ್ತಿನಲ್ಲಿ ಬಹಳಷ್ಟು ಪೈಪೋಟಿಯಲ್ಲಿ ಯಶಸ್ಸು ಕಾಣಬೇಕಾದರೆ ವಿಧ್ಯಾರ್ಥಿಗಳು ಜೀವನದ ಮುಂದಿನ ಗುರಿಯನ್ನು ಇಟ್ಟುಕೊಂಡು ಅಧ್ಯಯನ ಶೀಲರಾಗಬೇಕು ಎಂದರು.

ತಾವು ಪಡೆಯುವ ಶಿಕ್ಷಣ ಕೇವಲ ತಮಗಾಗಿ ಅಷ್ಟೇ ಸೀಮಿತವಾಗದೆ, ಸಮಾಜಕ್ಕೆ ಅಗತ್ಯವಿರುವ ಕಾರ್ಯಗಳಿಗೆ ಉಪಯೋಗವಾಗುವಂತೆ ಮುಂದಿನ ದಿನಗಳಲ್ಲಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುವ ವ್ಯಕ್ತಿಗಳು ಆಗಬೇಕು ಎಂದರು.

ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಚಂದ್ರಕಾಂತ ನಾಟಿಕಾರ ಅವರು ಮಾತನಾಡಿ, ಬಡ ರೈತ ಕಾರ್ಮಿಕರ ಮಕ್ಕಳಿಗೆ ಹೆಚ್ಚು ಹಣ ನೀಡಿ ಶಿಕ್ಷಣ ಪಡೆಯಲು ಕಷ್ಟ ಆಗುತ್ತಿರುವ ಸಂದರ್ಭದಲ್ಲಿ ಉಚಿತವಾಗಿ ತರಗತಿ ನಡೆಸುತ್ತಿರುವ ಎಬಿವಿಪಿಯ ಕಾರ್ಯ ಶ್ಲಾಘನೀಯ ಎಂದರು.

ಉಪನ್ಯಾಸಕ ಅಮಿತ ಸೋಲಾಪುರ ಅವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಪರಿಶ್ರಮದ ಮೂಲಕ ಯಶಸ್ವಿ ಕಂಡಾಗ ನಮ್ಮ ಸಂಬಂಧಿಕರು, ಕಾಲೇಜಿನ ಅಧ್ಯಾಪಕರು ಹಾಗೂ ಇತರರೂ ನಮಗೆಲ್ಲ ಗೌರವ ನೀಡುತ್ತಾರೆ, ಅದಕ್ಕೆ ನಾವೆಲ್ಲರೂ ಪರಿಶ್ರಮದಿಂದ ಅಧ್ಯಯನ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಎಬಿವಿಪಿಯ ನಗರ ಅಧ್ಯಕ್ಷ ಡಾ. ಸುಮಾ ಬೋಳರೆಡ್ಡಿ, ಚೇತನ ಕೋರವಾರ,

ಸಂದೀಪ ಅರಳಗುಂಡಿ, ಸ್ನೇಹಾ ಹಿರೇಮಠ, ಐಶ್ವರ್ಯ ಆಸಂಗಿ ಇತರರು ಉಪಸ್ಥಿತರಿದ್ದರು.

ಶಾಸಕ ಯತ್ನಾಳ 3ನೇ ಬಾರಿ ಬಿಜೆಪಿಯಿಂದ ಉಚ್ಚಾಟನೆ

ವಿಜಯಪುರ : ವಿಜಯಪುರ ನಗರ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷದ ಶಿಸ್ತು ಸಮಿತಿ ತಕ್ಷಣದಿಂದ ಜಾರಿಗೆ ಬರುವಂತೆ ಆರು ವರ್ಷಗಳ ಕಾಲ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟನೆಗೊಳಿಸಿದ್ದು, ಬಿಜೆಪಿ ಪಕ್ಷದಲ್ಲಿ ಹೊಂದಿದ ಎಲ್ಲ ಹುದ್ದೆಗಳಿಂದ ವಜಾ ಮಾಡಿದೆ. ಬಿಜೆಪಿ ಪಕ್ಷದಲ್ಲಿ ಶಾಸಕಯತ್ನಾಳ ಅಶಿಸ್ತಿನಿಂದ ವರ್ತಿಸಿದ ಹಿನ್ನೆಲೆಯಲ್ಲಿ ಪಕ್ಷದ ಹೈಕಮಾಂಡ್ ಉಚ್ಚಾಟನೆ ಮಾಡಿದೆ. ಯತ್ನಾಳ ಅವರು ಪಕ್ಷದಿಂದ ಉಚ್ಚಾಟನೆಯಾಗುತ್ತಿರುವುದು ಇದು ಮೂರನೇ ಬಾರಿ.

ಪಕ್ಷದ ಶಿಸ್ತನ್ನು ಪದೇ ಪದೇ ಉಲ್ಲಂಘನೆ ಮಾಡಿದ ಹಿನ್ನೆಲೆಯಲ್ಲಿ ಶೋಕಾಸ್ ನೋಟಿಸಿಗೂ ಉತ್ತರ ನೀಡಿದ್ದರೂ ಬಿಜೆಪಿ ಶಿಸ್ತು ಸಮಿತಿ ಯತ್ನಾಳ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ 6 ವರ್ಷಗಳ ಕಾಲ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟನೆ ಮಾಡಿದ್ದಲ್ಲದೆ ಬಿಜೆಪಿಯಲ್ಲಿ ಹೊಂದಿದ್ದ ಎಲ್ಲ ಹುದ್ದೆಗಳಿಂದ ತೆರವುಗೊಳಿಸಲಾಗಿದೆ ಎಂದು ಬಿಜೆಪಿ ಕೇಂದ್ರ ಶಿಸ್ತು ಸಮಿತಿ ಕಾರ್ಯದರ್ಶಿ ಓಂ ಪಾಠಕ್ ಅವರು ಆದೇಶಿಸಿದ್ದಾರೆ.

ಪಕ್ಷದ ಶಿಸ್ತು ಉಲ್ಲಂಘನೆ ಹಿನ್ನೆಲೆಯಲ್ಲಿ ಶಾಸಕ ಯತ್ನಾಳ ಅವರು 200ರ–10ರಲ್ಲಿ ಉಚ್ಚಾಟನೆಗೊಂಡಿದ್ದರು. 2014ರಲ್ಲಿ ಮತ್ತೆ ಬಿಜೆಪಿ ಸೇರಿದ್ದರು. 2015ರಲ್ಲಿ ಮತ್ತೆ ಉಚ್ಚಾಟನೆಗೊಂಡರು.

ಇದಾದ ಬಳಿಕ 2018ರಲ್ಲಿ ಮತ್ತೆ ಪಕ್ಷಕ್ಕೆ ಮರಳಿದ್ದರು. ಈಗ 2025ರ ಮಾ. 26ರಂದು ಮೂರನೇ ಬಾರಿಗೆ ಉಚ

ಧಾರವಾಡ ಜಿಲ್ಲೆ ಕ್ಷಯ ಮುಕ್ತ ಜಿಲ್ಲೆ ಆಗಬೇಕು

ಧಾರವಾಡ : ಧಾರವಾಡ ಜಿಲ್ಲೆಯಲ್ಲಿನ ಸುಮಾರು 35 ಗ್ರಾಮ ಪಂಚಾಯಿತಿಗಳನ್ನು ಕ್ಷಯ ಮುಕ್ತ ಗ್ರಾಮ ಪಂಚಾಯಿತಿಗಳನ್ನಾಗಿ ಮಾಡಿದ್ದು ಅಭಿನಂದನೀಯ. ಧಾರವಾಡ ಇಡಿ ಜಿಲ್ಲೆಯನ್ನು ಕ್ಷಯ ಮುಕ್ತ ಜಿಲ್ಲೆಯನ್ನಾಗಿ ಮಾಡಲು ಆರೋಗ್ಯ ಇಲಾಖೆ ಸಿಬ್ಬಂದಿ ಹಾಗೂ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಸಕ್ರಿಯವಾಗಿ ಭಾಗವಹಿಸಿ, ತೊಡಗಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು.

ಅವರು ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ರಾಷ್ಟ್ರೀಯ ಆರೋಗ್ಯ ಅಭಿಯಾನದಲ್ಲಿ ರಾಷ್ಟ್ರೀಯ ಕ್ಷಯ ರೋಗ ನಿರ್ಮೂಲನಾ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಂಡಿದ್ದ ವಿಶ್ವ ಕ್ಷಯರೋಗ ದಿನಾಚರಣೆ ಹಾಗೂ ಕ್ಷಯ ಮುಕ್ತ ಗ್ರಾಮ ಪಂಚಾಯಿತಿಗಳ ಸತ್ಕಾರ ಸಮಾರಂಭ ಉದ್ಘಾಟಿಸಿ, ಮಾತನಾಡಿದರು.

ವಿಶ್ವ ಆರೋಗ್ಯ ಸಂಸ್ಥೆಯು 2030 ರ ವೆಳೆಗೆ ಇಡೀ ವಿಶ್ವವನ್ನು ಕ್ಷಯರೋಗದಿಂದ ಮುಕ್ತಗೊಳಿಸುವ ಘೋ?ಣೆ ಮಾಡಿದೆ. ಈ ನಿಟ್ಟಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಕಳೆದ ಒಂದು ವ?ದಲ್ಲಿ 35 ಗ್ರಾಮ ಪಂಚಾಯಿತಿಗಳನ್ನು ಕ್ಷಯರೋಗ ಮುಕ್ತಗೊಳಿಸಲು ಪ್ರಯತ್ನಿಸಿ, ಜಿಲ್ಲೆಯ 35 ಗ್ರಾಮ ಪಂಚಾಯಿತಿಗಳನ್ನು ಕ್ಷಯ ಮುಕ್ತಗೊಳಿಸಿದ್ದು ಸಂತಸ ತಂದಿದೆ. ಜಿಲ್ಲೆಯಲ್ಲಿ ಈಗ 3,323 ಕ್ಷಯ ರೋಗದ ಪಾಸಿಟಿವ್ ಪ್ರಕರಣಗಳಿವೆ. ಇದರಲ್ಲಿ ಅತೀ ಹೆಚ್ಚು ಪ್ರಕರಣಗಳು ಹುಬ್ಬಳ್ಳಿ ಶಹರದಲ್ಲಿ ಕಂಡು ಬಂದಿವೆ. ಇದಕ್ಕೆ ಹೆಚ್ಚು ಜನಸಾಂದ್ರತೆ ಕಾರಣವಿರಬಹುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಆರೋಗ್ಯ ಇಲಾಖೆ ಸಿಬ್ಬಂದಿಗಳು ಹಾಗೂ ಗ್ರಾಮ ಪಂಚಾಯತ ಮತ್ತು ನಗರ ಸಂಸ್ಥೆಗಳ ಸಿಬ್ಬಂದಿ, ಪ್ರತಿನಿಧಿಗಳು ಸಕ್ರಿಯವಾಗಿ ಭಾಗವಹಿಸಬೇಕು. ವಿವಿಧ ಇಲಾಖೆಗಳ ಸಮನ್ವಯದಿಂದ ಈ ಕಾರ್ಯವನ್ನು ಯಶಸ್ವಿಯಾಗಿ ಮಾಡಿ, ಕ್ಷಯ ಮುಕ್ತ ಜಿಲ್ಲಾಯಾಗಿ ರೂಪಿಸಬೇಕೆಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು. 2023 ರ ಜನವರಿಯಿಂದ ಡಿಸೆಂಬರ್‌ವರೆಗೆ 2,2ಸ2 ಜನ ಕ್ಷಯರೋಗಿಗಳಿಗೆ ಅಗತ್ಯ ಚಿಕಿತ್ಸೆ ನೀಡಲಾಗಿದೆ. ಇದರಲ್ಲಿ 1,ಸ66 ಜನ ಗುಣಮುಖರಾಗಿದ್ದು, ಉಳಿದವರಿಗೆ ಚಿಕಿತ್ಸೆ ಮುಂದುವರಿಸಲಾಗಿದೆ. ಗುಣಮುಖವಾದವರ ದರ ಜಿಲ್ಲೆಯಲ್ಲಿ ಶೇ. 85.7 ರಷ್ಟಿದೆ. ಆರೋಗ್ಯ ಇಲಾಖೆಯವರು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಸಂಪೂರ್ಣ ಗುರಿ ಸಾಧಿಸಲಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಭರವಸೆ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿದ್ದ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ಅವರು ಮಾತನಾಡಿ, ಕ್ಷಯರೋಗ ಒಬ್ಬರಿಂದ ಒಬ್ಬರಿಗೆ ಹರಡುವ ರೋಗ. ಇದಕ್ಕೆ ಮುಂಜಾಗೃತೆ ಅಗತ್ಯವಿದೆ. ಜಿಲ್ಲೆಯ ಎಲ್ಲ 146 ಗ್ರಾಮ ಪಂಚಾಯಿತಿಗಳನ್ನು ಕ್ಷಯ ಮುಕ್ತ ಗ್ರಾಮ ಪಂಚಾಯಿತಿ ಮಾಡಲು ಕ್ರಮ ವಹಿಸಲಾಗಿದೆ ಎಂದರು.

ಪ್ರತಿ ಗ್ರಾಮ ಪಂಚಾಯತ ವ್ಯಾಪ್ತಿಯ ಮನೆಗಳಿಗೆ ಆರೋಗ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ, ಕ್ಷಯರೋಗದ ತಿಳುವಳಿಕೆ ನೀಡಲಿದ್ದಾರೆ. ಸಂಶಯಾಸ್ಪದ ಪ್ರಕರಣ ಕಂಡು ಬಂದಲ್ಲಿ ಕಫ ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸುತ್ತಾರೆ. ಕ್ಷಯರೋಗ ಖಚಿತಪಟ್ಟಲ್ಲಿ ಅವರ ಕುಟುಂಬ ಸದಸ್ಯರಿಗೆ ಜಾಗೃತಿ ಮೂಡಿಸಿ, ಮುಂಜಾಗೃತೆ ಕ್ರಮ ತಿಳಿಸುತ್ತಾರೆ ಎಂದರು.

ಗ್ರಾಮಪಂಚಾಯತ ಸದಸ್ಯರು, ಸಿಬ್ಬಂದಿಗಳು ಕ್ಷಯ ಮುಕ್ತ ಗ್ರಾಮ ಕಾರ್ಯಕ್ರಮಕ್ಕೆ ಅಗತ್ಯ ಸಹಕಾರ ನೀಡಲಿದ್ದಾರೆ. ಜನಜಾಗೃತಿ, ಮನೆ ಮನೆಗೆ ಭೇಟಿ ಕಾರ್ಯಕ್ರಮಗಳನ್ನು ಹೆಚ್ಚಿಸಬೇಕೆಂದು ಅವರು ಹೇಳಿದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಸಂಗಪ್ಪ ಗಾಬಿ, ಜಿಲ್ಲಾ ಆರ್.ಸಿ.ಎಚ್. ಅಧಿಕಾರಿ ಡಾ.ಸುಜಾತಾ ಹಸವೀಮಠ ಹಾಗೂ ಇತರರು ವೇದಿಕೆಯಲ್ಲಿದ್ದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಶಿ ಪಾಟೀಲ ಅವರು ಸ್ವಾಗತಿಸಿ, ಪ್ರಾಸ್ತವಿಕವಾಗಿ ಮಾತನಾಡಿದರು. ಜಿಲ್ಲಾ ಕ್ಷಯ ರೋಗ ನಿರ್ಮೂಲನಾಧಿಕಾರಿ ಡಾ.ರವೀಂದ್ರ ಬೋವೆರ ವಂದಿಸಿದರು. ಜಿಲ್ಲಾ ಶಿಕ್ಷಣ ಆರೋಗ್ಯ ಅಧಿಕಾರಿ ಬಿ.ಆರ್.ಪಾತ್ರೋಟ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಧಾರವಾಡ ತಾಲೂಕು ವೈದ್ಯಾಧಿಕಾರಿ ಡಾ.ಕೆ.ಎನ್.ತನುಜಾ ಸೇರಿದಂತೆ ವಿವಿಧ ಆರೋಗ್ಯ ಯೋಜನೆಗಳ ಕಾರ್ಯಕ್ರಮ ಅಧಿಕಾರಿಗಳು, ಸಿಬ್ಬಂದಿಗಳು, ವಿವಿಧ ಶಾಲಾ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕ್ಷಯ ಮುಕ್ತ ಗ್ರಾಮ ಪಂಚಾಯತಿಗಳು: 2023–24 ನೇ ಸಾಲಿನಲ್ಲಿ ಜಿಲ್ಲೆಯ ವಿವಿಧ 35 ಗ್ರಾಮ ಪಂಚಾಯತಿಗಳು ಕ್ಷಯ ಮುಕ್ತ ಗ್ರಾಮ ಪಂಚಾಯತಿಗಳಾಗಿ ಘೋಷಣೆ ಆಗಿವೆ. ಅವುಗಳಲ್ಲಿ ಕುಂದುಗೋಳ ತಾಲೂಕಿನ ಗುಡೇನಕಟ್ಟಿ, ಯಲಿವಾಳ ಮತ್ತು ಧಾರವಾಡ (ಗ್ರಾಮೀಣ) ತಾಲೂಕಿನ ಕಡಬಗಟ್ಟಿ, ಯರಿಕೊಪ್ಪ, ಕೊಟೂರು, ದೇವರಹುಬ್ಬಳ್ಳಿ, ನಿಗದಿ. ಹುಬ್ಬಳ್ಳಿ ತಾಲೂಕಿನ ಛಬ್ಬಿ, ಅಗಡಿ, ಕರಡಿಕೊಪ್ಪ, ವರೂರ, ಉಮಚಗಿ, ಕೋಳಿವಾಡ, ಇಂಗನಹಳ್ಳಿ, ಕಲಘಟಗಿ ತಾಲೂಕಿನ ಮುತ್ತಗಿ, ಗುಡ್ಡದಹುಲಿಕಟ್ಟಿ, ಬಿರವಳ್ಳಿ ಮತ್ತು ಕುಂದಗೋಳ ತಾಲೂಕಿನ ಗೌಡಗೇರಿ, ಮಳಲಿ, ಪಶುಪತಿಹಾಳ, ಯರಿಬೂದಿಹಾಳ, ಚಾಕಲಬ್ಬಿ, ಸಂಶಿ, ಬೆಟದೂರ, ಯರಗುಪ್ಪಿ ಮತ್ತು ನವಲಗುಂದ ತಾಲೂಕಿನ ಬೆಳವಟಗಿ, ಶಿರೂರ, ಶಲವಡಿ, ಅಳಗವಾಡಿ, ಹೆಬ್ಬಾಳ, ಜಾವೂರ, ಮೊರಬ, ಶಿರಕೋಳ, ನಾವಲ್ಲಿ, ನಾಯಕನೂರ ಗ್ರಾಮಗಳು ಸೇರಿವೆ.

ಈ ಎಲ್ಲ ಕ್ಷಯ ಮುಕ್ತ ಗ್ರಾಮ ಪಂಚಾಯತಿಗಳಿಗೆ ಜಿಲ್ಲಾಧಿಕಾರಿ ದಿವ್ಯ ಪ್ರಭು ಹಾಗೂ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಶಿ ಪಾಟೀಲ ಅವರು ಪ್ರಮಾಣ ಪತ್ರ, ಸ್ಮರಣಿಕೆ ನೀಡಿ, ಕಾರ್ಯಕ್ರಮದಲ್ಲಿ ಗೌರವಿಸಿದರು.

ಕ್ಷಯ ರೋಗ ಜಾಗೃತಿ ಜಾಥಾ: ವಿಶ್ವ ಕ್ಷಯರೋಗ ದಿನಾಚರಣೆ ಅಂಗವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಇಂದು ಬೆಳಿಗ್ಗೆ ಆಯೋಜಿಸಿದ್ದ ಜನಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯತ ಸಿಇಓ ಭುವನೇಶ ಪಾಟೀಲ ಅವರು ಹಸಿರು ಬಾವುಟ ತೋರುವ ಮೂಲಕ ಚಾಲನೆ ನೀಡಿದರು.

ಜಾಗೃತಿ ಜಾಥಾ ನಡಿಗೆಯು ಡಿಎಚ್‌ಓ ಕಚೇರಿಯಿಂದ ಆರಂಭವಾಗಿ ಹಳೆ ಬಸ್ ನಿಲ್ದಾಣ, ವಿವೇಕಾನಂದ ಸರ್ಕಲ್, ಆಲೂರು ವೆಂಕಟರಾವ್ ವೃತ್ತದ ಮೂಲಕ ಮರಳಿ ಡಿಎಚ್‌ಓ ಕಚೇರಿ ತಲುಪಿತು. ಜಾಥಾ ನಡಿಗೆಯಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು,

ಸಿಬ್ಬಂದಿಗಳು, ವಿವಿಧ ನರ್ಸಿಂಗ್ ಮತ್ತು ವೈದ್ಯಕೀಯ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜನಪದ ಉತ್ಸವ

ಬಂಕಾಪುರ : ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಬಂಕಾಪುರ ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜನಪದ ಉತ್ಸವಕ್ಕೆ ಶಾಸಕ ಯಾಸಿರ್ ಅಹ್ಮದಖಾನ್‌ಪಠಾಣ್‌ಡೊಳ್ಳುಬಾರಿಸುವುದರ ಮೂಲಕ ಚಾಲನೆ ನೀಡಿದರು. ವಿದ್ಯಾರ್ಥಿಗಳು ಧರ್ಮ ಜಾತಿ ವ್ಯವಸ್ಥೆಯಿಂದ ದೂರವಿದ್ದು ಎಲ್ಲರೂ ಒಂದೇ ಎಂದು ಶ್ರಮಿಸಬೇಕು. ನಾವು ವಿದೇಶ ವಿಚಾರಕ್ಕೆ ಮಾರಿ ಹೋಗಿದ್ದೇವೆ. ವಿದೇಶಿಗರು ಮಾನವ ಸಂಪನ್ಮೂಲಗಳನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಎಲ್ಲ ವಿದ್ಯಾರ್ಥಿಗಳು ದೇಶ ಪ್ರೇಮ ದೇಶದ ಆಚಾರ ವಿಚಾರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ಜಾನಪದ ವಿದ್ವಾಂಸ ಡಾ|ಕೆ. ಸಿ. ನಾಗರಜ್ಜಿ ಮಾತನಾಡಿ ವಿದೇಶದಿಂದ ಬಂದಂತ ಡಿಜೆ ಸಂಸ್ಕೃತಿಗೆ ನಾವು ಜಾರಿ ಹೋಗಿದ್ದೇವೆ ಇವತ್ತು ಜಾನಪದ ಕಲೆ, ಸಂಸ್ಕೃತಿ ಸಾಹಿತ್ಯ ಸಂಸ್ಕಾರಗಳಿಂದ ದೂರಸರಿದಿರುವುದು ವಿಷಾದ ಸಂಗತಿ. ಜನನಿಯಿಂದ ಪ್ರಾರಂಭವಾದ ಜನಪದ ಕಲೆಯನ್ನು ಉಳಿಸಿ ಬೆಳೆಸಬೇಕಾದ ಅನಿವಾರ್ಯತೆ ಇದೆ. ಆ ದಿಸೆಯಲ್ಲಿ ಸರಕಾರ ರಾಜ್ಯದ್ಯಂತ ಕಾಲೇಜುಗಳಲ್ಲಿ ಜಾನಪದ ಉತ್ಸವ ಮಾಡಲು ಆದೇಶಿಸಿರುವುದು ಸರ್ಕಾರಕ್ಕೆ ಜನಪದ ಮೇಲಿರುವ ಕಾಳಜಿಯಾಗಿದೆ ಎಂದರು.

ಕಾಲೇಜಿನ ಪ್ರಾಚಾರ್ಯರು ಡಾ| ರಮೇಶ್ ತೆವರಿ ಮಾತನಾಡಿ ಕಾಲೇಜಿಗೆ ಅವಶ್ಯಕತೆ ಇರುವ ಕ್ರೀಡಾಂಗಣ, ಕಾಂಪೌಂಡ್, ರಸ್ತೆ ನಿರ್ಮಾಣ, ಸಭಾಭವನಕ್ಕೆ ಆಸನದ ವ್ಯವಸ್ಥೆ ಸೇರಿದಂತೆ ಇತರೆ ಬೇಡಿಕೆ ಈಡೇರಿಸುವಂತೆ ಶಾಸಕರಿಗೆ ಮನವಿ ಮಾಡಿದರು. ಹಿರೇಕೆರೂರು ಕಾಲೇಜಿನ ಕನ್ನಡ ಉಪನ್ಯಾಸಕ ಡಾ| ಕಾಂತೇಶ ರೆಡ್ಡಿ ಮಾತನಾಡಿದರು. ಪುರಸಭೆ ಅಧ್ಯಕ್ಷ ಮಮತಾ ಮಾಗಿ, ಉಪಾಧ್ಯಕ್ಷ ಆಂಜನೇಯ ಗುಡಗೇರಿ, ಇಮ್ತಿಯಾಜ್ ಬಟ್ಟೆ ಪುರಿ, ಐ. ಕ್ಯೂ. ಎ. ಸಿ. ಸಂಚಾಲಕಿ ಲೂಬ್ನಾ ನಾಜ್, ಸಾಂಸ್ಕೃತಿಕ ವಿಭಾಗದ ಸಂಚಾಲಕ ನಿಂಗಪ್ಪ ಕಲಕೋಟಿ, ವಿಜಯ್ ಗುಡಗೇರಿ ಸೇರಿದಂತೆ ಕಾಲೇಜಿನ ಉಪನ್ಯಾಸಕ ಸಿಬ್ಬಂದಿ, ವಿದ್ಯಾರ್ಥಿಗಳು, ಮುಖಂಡರು ಉಪಸ್ಥಿತರಿದ್ದರು ಪ್ರೊ| ಉಮೇಶ್ ಕರ್ಜಿಗಿ ನಿರೂಪಿಸಿದರು.

ಮಾಡಿಕರ ತೈಲ ಸಂಸ್ಥೆ ಮಾರಾಟ ಮಳಿಗೆಗಳು ಆರಂಭ

ಧಾರವಾಡ : ನಗರದ ಯಾಲಕ್ಕಿ ಶೆಟ್ಟರ್ ಕಾಲೋನಿ ಹಾಗೂ ಮರಾಠ ಕಾಲೋನಿಯಲ್ಲಿ ಮಾಡಿಕರತೈಲ ಸಂಸ್ಥೆಯ ಶುದ್ಧ ಗಾಣದ ಅಡುಗೆ ಎಣ್ಣೆಗಳು ಹಾಗೂ ಸಾವಯುವ ಉತ್ಪನ್ನಗಳ ೯ ಮತ್ತು 10ನೇ ಮಾರಾಟ ಮಳಿಗೆ ಶಾಖೆಗಳನ್ನು ಪ್ರಾರಂಭ ಮಾಡಲಾಯಿತು.

ಉದ್ಘಾಟನಾ ಸಮಾರಂಭದಲ್ಲಿ ರಾಜೀವ್ ದೀಕ್ಷಿತ್ ವಿಚಾರ ವೇದಿಕೆ ಸದಸ್ಯರು ಹಾಗೂ ಆಯಾ ಪ್ರದೇಶದ ಗಣ್ಯರು ಸಹ ಭಾಗವಹಿಸಿದ್ದರು.

ಮಾಡಿಕರ ತೈಲ ಸಂಸ್ಥೆಯ ಹಿರಿಯರಾದ ಪುರುಷೋತ್ತಮ್ ಮಾಡಿಕರವರು ಮಾತನಾಡಿ ತಮ್ಮ ಸಂಸ್ಥೆ ಮಾಡುತ್ತಿರುವುದು ವ್ಯಾಪಾರವಲ್ಲ, ಸಾರ್ವಜನಿಕರಿಗೆ ಶುದ್ಧವಾದ ಅಡಿಗೆ ಎಣ್ಣೆಯನ್ನು ಹಾಗೂ ಇತರೆ ಸಾವಯುವ ಉತ್ಪನ್ನಗಳನ್ನು ಧಾರವಾಡ ಶಹರದ ಎಲ್ಲಾ ಭಾಗದ ಜನರಿಗೂ ಸಹಜವಾಗಿ ಒದಗಿಸಬೇಕೆಂದು ವಿವಿಧ ಪ್ರದೇಶಗಳಲ್ಲಿ ಮಳಿಗೆಗಳನ್ನು ತೆಗೆದು ಸೇವೆ ಮಾಡುವ ಉದ್ದೇಶ ಹೊಂದಿದ್ದೇವೆ ಎಂದರು, ಹಾಗೂ ನಾವು ರಾಜೀವ್ ದೀಕ್ಷಿತರ ದೀಕ್ಷಿತರ ವಿಚಾರಗಳು, ಬಸವಾನಂದ ಶ್ರೀಗಳ ಆಶೀರ್ವಾದ ಮತ್ತು ಪೂಜ್ಯ ಕಾಡಸಿದ್ದೇಶ್ವರ ಮಹಾಸ್ವಾಮಿಗಳು ಕಣ್ಣೀರಿ ಮಠ ಕೊಲ್ಲಾಪುರ್ ಇವರ ಮಾರ್ಗದರ್ಶನದೊಂದಿಗೆ ಮತ್ತು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಜಿ ಅವರ ವೋಕಲ್ ಫಾರ್ ಲೋಕಲ್ ಘೋಷಣೆಗೆ ಅನುಗುಣವಾಗಿ ಈ ಕಾರ್ಯ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಬಸವಾನಂದ ಶ್ರೀಗಳು ಉದ್ಘಾಟನೆ ಮಾಡಿ ಮಾಡಿಕರ್ ತೈಲ ಸಂಸ್ಥೆ ಇನ್ನೂ ಹೆಚ್ಚೆಚ್ಚು ಜನರಿಗೆ ಅನುಕೂಲವಾಗುವಂತೆ ಮಾಡಲಿ ಎಂದು ಆಶೀರ್ವಾದ ನೀಡಿದರು. ಶಾಸಕರಾದ ಅರವಿಂದ್ ಬೆಲ್ಲದ ಅವರು ಉದ್ಘಾಟನೆ ಮಾಡಿ ಎಲ್ಲ ಉತ್ಪನ್ನಗಳ ಬಗ್ಗೆ ವಿವರವಾಗಿ ಮಾಹಿತಿಯನ್ನು ಪಡೆದು ಮಾಡಿಕರ ಕುಟುಂಬ ಹಾಗೂ ರಾಜೀವ್ ದೀಕ್ಷಿತ್ ವಿಚಾರ ವೇದಿಕೆ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿದರು. ಆಂದೋಲನಕ್ಕೆ ಬೆಂಬಲ ನೀಡಬೇಕೆಂದು ತಿಳಿಸಿದರು. ಈರೇಶ್ ಅಂಚಟಗೇರಿ ಅವರು ಉದ್ಘಾಟಿಸಿ ಈ ವೇದಿಕೆ ವಿಚಾರದ ಬಗ್ಗೆ ಒಂದು ವಿಚಾರ ಸಂಕಿರಣವನ್ನು ನಡೆಸಬೇಕೆಂದು ಹೇಳಿದರು.

ಸತ್ಸಂಗದಿಂದ ಸದೃಢ ಸಮಾಜ ನಿರ್ಮಿಸಲು ಸಾಧ್ಯ

ದೇವರ ರೂಪದಲ್ಲಿರುವ ಸಾಧು ಸಂತರ ಸಹವಾಸ ಮಾಡುವುದೇ ಸತ್ಸಂಗ | ಸತ್ಯದ ಒಡನಾಟವೇ ಸತ್ಸಂಗವಾಗಿದೆ

ಬನಹಟ್ಟಿ : ದಿನ ನಿತ್ಯದ ಜೀವನದಲ್ಲಿ ಅಧ್ಯಾತ್ಮಿಕ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವ ಮೂಲಕ ಅಧ್ಯಾತ್ಮಿಕ ಸತ್ಸಂಗದಲ್ಲಿ ಭಾಗವಹಿಸಬೇಕು. ಜನರು ಧರ್ಮ ಗ್ರಂಥಗಳನ್ನು ಓದಿದಾಗ ಅದನ್ನು ಸತ್ಸಂಗವೆಂದು ಪರಿಗಣಿಸಲಾಗುತ್ತದೆ. ಸತ್ಸಂಗದಿಂದ ಸದೃಢ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯ ಎಂದು ರಬಕವಿಯ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿ ತಿಳಿಸಿದರು.

ಅವರು ಬುಧವಾರ ಬನಹಟ್ಟಿಯ ಹಳೆಯ ನೀರಿನ ಟ್ಯಾಂಕ್ ಹತ್ತಿರದ ಸದಾಶಿವ ಅಜ್ಜನವರ ಜಾತ್ರಾ ಮಹೋತ್ಸವದ ಅಂಗವಾಗಿ ಮೂರು ದಿನಗಳ ಕಾಲ ಹಮ್ಮಿಕೊಂಡ ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಾಧು ಸಂತರ ಒಡನಾಟವೇ ಸತ್ಸಂಗವಾಗಿದೆ. ಇದು ಸಂಪೂರ್ಣ ಸತ್ಯವನ್ನು ಪ್ರತಿನಿಧಿಸುತ್ತದೆ. ನಾವು ನೇರವಾಗಿ ದೇವರೊಂದಿಗೆ ಸಂಪರ್ಕ ಹೊಂದಲು ಸಾಧ್ಯವಿಲ್ಲ. ಅದು ತುಂಬಾ ಕಠಿಣವಾದ ಮಾರ್ಗವಾಗಿದೆ. ಆದ್ದರಿಂದ ಭೂಮಿಯ ಮೇಲೆ ದೇವರ ರೂಪದಲ್ಲಿರುವ ಸಾಧು ಸಂತರ ಸಹವಾಸ ಮಾಡುವುದೇ ಸತ್ಸಂಗವಾಗಿದೆ ಎಂದು ಗುರುಸಿದ್ಧೇಶ್ವರ ಸ್ವಾಮೀಜಿ ತಿಳಿಸಿದರು.

ಬನಹಟ್ಟಿ ಹಿರೇಮಠದ ಶರಣಬಸವ ಶಿವಾಚಾರ್ಯರು ಮಾತನಾಡಿ, ಸತ್ಸಂಗದಲ್ಲಿ ಭಾಗವಹಿಸುವುದರಿಂದ ಮಹಾನುಭಾವರ ಜೀವನ ಚರಿತ್ರೆಗಳನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ.

ಮಹಾನುಭಾವರು ನಮ್ಮೆಲ್ಲರ ಉದ್ಧಾರಕ್ಕಾಗಿ ಜನ್ಮ ತಾಳಿದವರು. ಅವರ ತತ್ವ ಮತ್ತು ಸಂದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಜೀವನ ನಡೆಸಬೇಕು. ಮೂರು ದಿನಗಳ ಕಾಲ ನಡೆಯುವ ಸತ್ಸಂಗ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರೂ ಭಾಗವಹಿಸಬೇಕು ಎಂದು ತಿಳಿಸಿದರು.

ಅಮ್ಮಲಜೇರಿಯ ಜ್ಞಾನಮಯಾನಂದ ಸ್ವಾಮೀಜಿ ಪ್ರವಚನ ನೀಡಿದರು. ಹೊಳೆ ಬಬಲಾದಿ ಮಠದ ವೇದಮೂರ್ತಿ ಬಸಯ್ಯ ಸ್ವಾಮೀಜಿ, ನಗರದ ಹಿರಿಯರಾದ ಕಾಡಪ್ಪ ಬಾಬಾನಗರ ಉಪಸ್ಥಿತರಿದ್ದರು.

ರಾಜು ಕಡ್ಲಿ, ಗಂಗಪ್ಪ ಒಂಟಗೂಡಿ, ಅನಿಲ ಸಿದ್ದಾಪುರ, ಕುಬೇರ ಬಾಡಗಿ, ಶಂಭು ಮಮದಾಪುರ, ಲಕ್ಷ್ಮಿ ನಿಂಬರಗಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಶಾಸಕರಿಂದ ಸಮುದಾಯ ಭವನ ಕಾಮಗಾರಿ ವೀಕ್ಷಣೆ

ತೇರದಾಳ : 2023–24 ನೇ ಸಾಲಿನ ಸ್ಥಳೀಯ ಶಾಸಕರ ವಿಶೇಷ ಅನುದಾನ ಅಡಿಯಲ್ಲಿ ಇಲ್ಲಿನ ಕಲ್ಲಟ್ಟಿ ಓಣಿಯಲ್ಲಿ ನಿರ್ಮಾಣಗೊಳ್ಳುತ್ತಿರುವ ಸಾರ್ವಜನಿಕ ಸಮುದಾಯ ಭವನ ಕಟ್ಟಡವನ್ನು ಶಾಸಕ ಸಿದ್ದು ಸವದಿ ಗುರುವಾರ ವೀಕ್ಷಣೆ ಮಾಡಿದರು.

ಪಟ್ಟಣದಲ್ಲಿ ಸಮುದಾಯ ಭವನ ನಿರ್ಮಾಣದ ಬೇಡಿಕೆ ಬಹಳಷ್ಟು ದಿನಗಳಿಂದ ಇದ್ದಿತು. ಆ ದಿಶೆಯಲ್ಲಿ ಹಿಂದಿನ ಅವಧಿಯಲ್ಲಿ ಅಂದಾಜು ಎರಡು ಕೋಟಿ ಅನುದಾನ ನೀಡಲಾಗಿದ್ದು, ಕಾಮಗಾರಿಯ ಗುಣಮಟ್ಟ ಕಾಯ್ದುಕೊಳ್ಳುವಂತೆ ಅವರು ಗುತ್ತಿಗೆದಾರರಿಗೆ ಸೂಚನೆ ನೀಡಿದರು. ಪುರಸಭೆಯ 15 ನೇ ಹಣಕಾಸು ಯೋಜನೆಯಡಿ 1.55 ಕೋಟಿ ರೂ. ಅನುದಾನದಲ್ಲಿ ಚರಂಡಿ, ರಸ್ತೆ, ಕೊಳವೆಬಾವಿ, ಶೌಚಾಲಯ, ಹೈಮಾಸ್ಕ್ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳು ಪ್ರಾರಂಭಗೊಂಡಿವೆ ಎಂದು ಮುಖ್ಯ

ಶೌಚಾಲಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಿ

ರಬಕವಿ–ಬನಹಟ್ಟಿ : ಸರಕಾರದ ಅನುದಾನದಿಂದ ನಿರ್ಮಿಸಲಾಗುತ್ತಿರುವ ಶೌಚಾಲಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಕಾಮಗಾರಿಗಳು ಗುಣಮಟ್ಟದ್ದಾಗಿರಲಿ ಎಂದು ತೇರದಾಳ ಮತಕ್ಷೇತ್ರದ ಶಾಸಕ ಸಿದ್ದು ಸವದಿ ಹೇಳಿದರು.

ಅವರು ರಬಕವಿ–ಬನಹಟ್ಟಿ ನಗರಸಭೆಯ ರಾಮಪುರದ ವಾರ್ಡ ನಂ. 2ಸ ಹಾಗೂ 30 ರಲ್ಲಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ 4 ಅನುದಾನದಲ್ಲಿ ಪುರುಷ, ಮಹಿಳಾ ಶೌಚಾಲಯ, ಹಿಂದೂ ರುದ್ರಭೂಮಿ ಕಂಪೌಂಡ, ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ಬಯಲು ಶೌಚ ಮುಕ್ತ ದೇಶ ನಿರ್ಮಾಣ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಬಯಲು ಶೌಚಾಲಯಗಳನ್ನು ಬಂದ್ ಮಾಡಿ ಪ್ರತಿಯೊಂದು ಮನೆಯಲ್ಲಿಯೂ ಶೌಚಾಲಯಗಳನ್ನು ನಿರ್ಮಿಸಿಕೊಂಡು ಆರೋಗ್ಯವಂತ ಸಮಾಜ ನಿರ್ಮಾಣ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ವಿದ್ಯಾ ಧಬಾಡಿ, ಪೌರಾಯುಕ್ತ ಜಗದೀಶ ಈಟಿ, ಮುಖಂಡರಾದ ಧರೆಪ್ಪ ಉಳ್ಳಾಗಡ್ಡಿ, ಬಸಪ್ರಭು ಹಟ್ಟಿ, ವಿವೇಕಾನಂದ ಭಸ್ಮೆ, ಶ್ರೀಶೈಲ ಬೀಳಗಿ, ಯಲ್ಲಪ್ಪ ತಳವಾರ, ಪ್ರಕಾಶ ಸಿಂಘಣ, ಅರುಣ ಬುದ್ನಿ, ವಿಜಯ ಕಲಾಲ, ಶ್ರೀಶೈಲ ಆಲಗೂರ, ಜಿತೇಂದ್ರ ದೇಸಾಯಿ, ಸುನೀಲ ವಜ್ರಮಟ್ಟಿ, ರವಿ ಕೊರ್ತಿ ಸೇರಿದಂತೆ ಅನೇಕರು ಹಾಜರಿದ್ದರು.

ಕೃಷ್ಣಾ ನದಿಗೆ 2 ಟಿಎಂಸಿ ನೀರು ಬಿಡುಗಡೆಗೆ ಒತ್ತಾಯ

ರಬಕವಿ–ಬನಹಟ್ಟಿ: ಕುಡಿಯುವ ನೀರಿನ ದೃಷ್ಟಿಯಿಂದ ಕೃಷ್ಣಾ ನದಿಗೆ ಕೋಯ್ನಾ ಜಲಾಶಯದಿಂದ ಕನಿಷ್ಠ 2 ಟಿಎಂಸಿ ನೀರನ್ನು ಎಪ್ರೀಲ್ ಅಂತ್ಯದ ಒಳಗಾಗಿ ನೀರು ಬಿಡುಗಡೆ ಮಾಡಿಸಬೇಕು ಎಂದು ಸರಕಾರವನ್ನು ಒತ್ತಾಯಿಸುತ್ತೇನೆ ಎಂದು ತೇರದಾಳ ಮತಕ್ಷೇತ್ರದ ಶಾಸಕ ಸಿದ್ದು ಸವದಿ ಹೇಳಿದರು.

ಇಂದು ಬುಧವಾರ ಬನಹಟ್ಟಿಯಲ್ಲಿ ಕೃಷ್ಣಾ ನದಿ ನೀರು ಕಡಿಮೆಯಾದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಬೇಸಿಗೆ ನಿಭಾಯಿಸುವ ದಿಶೆಯಲ್ಲಿ ತೇರದಾಳ ಮತಕ್ಷೇತ್ರದ ಸಾರ್ವಜನಿಕರು ನೀರನ್ನು ಮಿತವಾಗಿ ಬಳಸಬೇಕು. ಬೋರವೆಲ್ಗಳಲ್ಲಿ ಬೇಕಾದಷ್ಟು ನೀರನ್ನು ಮಾತ್ರ ಪಡೆದುಕೊಂಡು ಬೇಸಿಗೆ ಕಳೆಯುವಲ್ಲಿ ಎಲ್ಲರೂ ಸಹಕರಿಸಬೇಕು. ಬೇಸಿಗೆಯಲ್ಲಿ ನೀರನ್ನು ಮಿತವಾಗಿ ಬಳಸಿ ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಈ ಭಾಗದ ಜನತೆಗೆ ದ್ರೋಹ ಬೇಡ:

ಹಿಪ್ಪರಗಿ ಜಲಾಶಯದಿಂದ 0.25 ಟಿಎಂಸಿ ನೀರು ಬಿಟ್ಟಿರುವುದು ಅವೈಜ್ಞಾನಿಕವಾಗಿದ್ದು, ಅಧಿಕಾರ ಇದೆ ಎಂದು ನೀರು ಲಿಫ್ಟ ಮಾಡಿಕೊಂಡು ಹೋಗುವುದು ಸರಿಯಲ್ಲ. ಈ ಭಾಗದಲ್ಲಿ ಹಲವಾರು ನಗರಸಭೆ, ಪುರಸಭೆ, ಗ್ರಾಮ ಪಂಚಾಯತಿಗಳು ಬರುತ್ತಿದ್ದು ಈ ಭಾಗದ ಜನರ ಕುಡಿಯುವ ನೀರಿನ ಭವಣೆ ಬಗ್ಗೆ ಗಮನವಿರಬೇಕು. ನೀರಾವರಿ ಸಚಿವ ಡಿ. ಕೆ. ಶಿವಕುಮಾರ ಅವರ ಜೊತೆ ನಾನು ಮತ್ತು ಜಮಖಂಡಿ ಶಾಸಕ ಗುಡಗುಂಟಿಯವರು ಇದನ್ನು ನಿಲ್ಲಿಸಬೇಕು ಎಂದು ಮನವಿ ಮಾಡಿದ್ದೇವೆ. ಈ ಕುರಿತು ಎಂ. ಬಿ. ಪಾಟೀಲರಿಗೆ ವಿಚಾರಿಸಿದಾಗ ನಾವು ಕೂಡಾ ನೀರನ್ನು ಕುಡಿಯುವ ಉದ್ದೇಶಕ್ಕಾಗಿ ತೆಗೆದುಕೊಂಡು ಹೋಗುತ್ತಿದ್ದು ಬೆಳೆಗಳಿಗೆ ಅಲ್ಲ. ನಿಮ್ಮ ಭಾಗಕ್ಕೆ ತೊಂದರೆಯಾಗದಂತೆ ಮಹಾರಾಷ್ಟ್ರದ ಕೋಯ್ನಾದಿಂದ ನೀರು ಬಿಡಿಸಲಾಗುವುದು ಎಂದು ಹೇಳಿದ್ದಾರೆ. ಆದರೆ ಈ ಭಾಗದ ಜನರ ನೀರಿನ ಸಮಸ್ಯೆ ಬಗ್ಗೆ ಯೋಚಿಸದೇ ತಮ್ಮ ಕ್ಷೇತ್ರದ ಜನರ ವೈಯಕ್ತಿಕ ಸ್ವಾರ್ಥಕ್ಕಾಗಿ ನೀರನ್ನು ಲಿಫ್ಟ ಮಾಡಿದ್ದು, ಸರಕಾರದ ಅಧಿಕಾರ ದುರುಪಯೋಗ ಪಡಿಸಿಕೊಂಡು ಕೃಷ್ಣಾ ನದಿಯ ಎಡಬದಿಯಲ್ಲಿರುವ ರೈತರು ಮತ್ತು ಸಾರ್ವಜನಿಕರಿಗೆ ಅನ್ಯಾಯ ಮಾಡುವಂತಹ ಕೆಲಸ ನಡೆದಿದೆ. ಮಾನವೀಯತೆಯ ದೃಷ್ಟಿಯಿಂದ ನೀರು ಬಿಡಬಾರದಿತ್ತು. ಮಳೆಗಾಲ ಸಂದರ್ಭದಲ್ಲಿ ಬೇಕಾದಷ್ಟು ನೀರು ತೆಗೆದುಕೊಳ್ಳಿ. ಆದರೆ ಬೇಸಿಗೆಯಂತಹ ಸಂದರ್ಭದಲ್ಲಿ ನಿಂತ ನೀರನ್ನು ಲಿಫ್ಟ ಮಾಡಿರುವುದು ಈ ಭಾಗದ ಜನತೆಗೆ ಮಾಡಿದ ಮಹಾ ದ್ರೋಹವಾಗಿದೆ. ಕೃಷ್ಣಾ ನದಿಯ ಎಡಬದಿಯ ರೈತರ ಬಗ್ಗೆ ಇವರಿಗೆ ಕಾಳಜಿ ಇಲ್ಲ ಎಂದು ಸವದಿ ಹೇಳಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಪ್ಪಿಸಿಕೊಳ್ಳುವ ಉಪಾಯಗಳು

ಭಾರತ ದೇಶದಲ್ಲಿ ಪ್ರಧಾನಮಂತ್ರಿ, ರಾಷ್ಟ್ರಪತಿ ಮತ್ತು ರಾಜ್ಯಪಾಲರಿಗಿಂತಲೂ ಹೆಚ್ಚಿನ ಶಿಷ್ಟಾಚಾರ (ಪ್ರೋಟೋಕಾಲ್) ನ್ಯಾಯಾಧೀಶರಿಗೆ ಇರುತ್ತದೆ.

ಕೇಂದ್ರ ಸರ್ಕಾರ ಅಥವಾ ರಾಜ್ಯಸರ್ಕಾರ ಇವರನ್ನು ಸೇವೆಯಿಂದ ಅಮಾನತು ಇಲ್ಲವೆ ವಜಾ ಮಾಡುವಂತಿಲ್ಲ.

ಇವರ ನಿವಾಸಗಳ ಮೇಲೆ ಪೊಲೀಸರು, ಸಿಬಿಐನವರು,ಇ.ಡಿ. ಮುಂತಾದ ಸಂಸ್ಥೆಗಳು ಮುಖ್ಯ ನ್ಯಾಯಮೂರ್ತಿಗಳ ಒಪ್ಪಿಗೆ ಪಡೆಯದೇ ದಾಳಿ ಮಾಡುವಂತಿಲ್ಲ.

ಆದ್ದರಿಂದ ಭಾರತದ ಕೆಲವು ನ್ಯಾಯಾಧೀಶರು ಭ್ರಷ್ಟಾಚಾರದಲ್ಲಿ ತೊಡಗುತ್ತಾರೆ ಮತ್ತು ನೋಟುಗಳ ಕಂತೆಗಳನ್ನು ತಮ್ಮ ಮನೆಯಲ್ಲಿಯ ಕಪಾಟುಗಳಲ್ಲಿ ತುಂಬಿರುತ್ತಾರೆ. ಯಾರ ಕೈಗೂ ಅವರು ಸಿಗುವುದಿಲ್ಲ.

ನ್ಯಾಯಾಧೀಶ ಯಶವಂತ ವರ್ಮಾ ಕೂಡ ಅವರು ವಾಸವಿದ್ದ ಮನೆಗೆ ಬೆಂಕಿ

ಬಿದ್ದಿರದಿದ್ದರೆ ಹಾಗೂ ಓರ್ವ ಫಾಯರ್ ಬ್ರಿಗೇಡ್ ನ ಪ್ರಾಮಾಣಿಕ ಸಿಬ್ಬಂದಿಯು ಅವರ ಮನೆಯಲ್ಲಿದ್ದ ಎಲ್ಲ ಪ್ರಸಂಗವನ್ನು ತನ್ನ ಮೊಬೈಲ್ ನಲ್ಲಿ ವ್ಹಿಡಿಯೊ ಶೂಟಿಂಗ್ ಮಾಡಿರದಿದ್ದರೆ ನೋಟುಗಳೊಂದಿಗೆ ವರ್ಮಾ ಸಿಗುತ್ತಿರಲಿಲ್ಲ.

ಸುಪ್ರೀಂ ಕೋರ್ಟ್ ತಕ್ಷಣವೇ ಇದು ಕೇವಲ ಗಾಳಿ ಸುದ್ದಿಯಾಗಿದೆ ಎಂದು ಕ್ಲೀನ್ ಚಿಟ್ ನೀಡಿತು.

ದೆಹಲಿ ಹೈಕೋರ್ಟ್ ಕೂಡ ಕೂಡಲೇ ಇವೆಲ್ಲ ಗಾಳಿ ಸುದ್ದಿ ಅಂತ ಕ್ಲೀನ್ ಚಿಟ್ ನೀಡಿತು. ಟಿವಿ ಪರದೆಯಲ್ಲಿ ವಿ. ಕೆ. ಮೆನನ್, ಅಭಿಷೇಕ್ ಮನು ಸಿಂಘ್ವಿ ಗಳಂಥ ದೊಡ್ಡ ದೊಡ್ಡ ವಕೀಲರು, ಬೆಂಕಿಯು ನ್ಯಾಯಾಧೀಶರ ಮನೆಯಲ್ಲಿದ್ದ ಜನರೇಟರನಲ್ಲಿ ಆವರಿಸಿತ್ತು. ಮನೆಗೆ ಅಲ್ಲ. ಹೀಗಾಗಿ ಅಲ್ಲಿ ನೋಟುಗಳ ಕಂತೆಗಳು ಸಿಗುವ ಪ್ರಮೇಯವೇ ಬರುವುದಿಲ್ಲ ಎಂದು ಹೇಳಿದರು.

ತರತರದ ಬಚಾವಾತ್ಮಕ ಹೇಳಿಕೆಯನ್ನು ಕೊಡತೊಡಗಿದರು.

ಆದರೆ ಬೆಂಕಿ ತಗುಲಿದ್ದ ಸಂದರ್ಭದಲ್ಲಿ ಅಲ್ಲಿ ಕೆಲವೊಂದು ನೋಟುಗಳು ಅರ್ಧಂಬರ್ಧ ಸುಟ್ಟು ಕರಕಲಾಗಿ ಹಾರಾಡತೊಡಗಿದವು. ಆಗ ಬೆಂಕಿ ನಂದಿಸಲು ತೊಡಗಿದ್ದ ಅಗ್ನಿಶಾಮಕ ದಳದ ಸಿಬ್ಬಂದಿಯೊಬ್ಬ ಅಲ್ಲಿನ ಇಡೀ ಘಟನಾವಳಿಗಳನ್ನು ತನ್ನ ಮೊಬೈಲ್ ನಲ್ಲಿ ವ್ಹಿಡಿಯೊ ಶೂಟಿಂಗ್ ಮಾಡಿಕೊಂಡಿದ್ದ. ಇದು ಯಾರಿಗೂ ತಿಳಿದಿರಲಿಲ್ಲ.

ಇದರಿಂದ ಕಂಗಾಲಾದ ಜಸ್ಟೀಸ್ ವರ್ಮಾ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬಂತೆ ನೋಟುಗಳು ಸಿಕ್ಕಿದ್ದು ಸ್ಟೋರ್ ರೂಂ ನಲ್ಲಿ ಅಂತ ವರಸೆ ತೆಗೆದ.

ಹೇಮಂತ್ ಸೋರೇನ್ ವಿರುದ್ಧ ಸಿಬಿಐ ತನಿಖೆ ಕೈಗೊಂಡಾಗ, ಆತನ ವಿರುದ್ಧ ಯಾವುದೇ ತನಿಖೆ ಕೈಗೊಳ್ಳದಂತೆ ಇದೇ ವರ್ಮಾ ಜಜ್ ಆದೇಶ ಹೊರಡಿಸಿದ್ದು.

ದೆಹಲಿಯಲ್ಲಿ ನಡೆದ ದಂಗೆಯಲ್ಲಿ ಹನ್ನೊಂದು ಜನ ಗಲಭೆಖೋರರ ವಿರುದ್ಧ ಸಾಕಷ್ಟು ಪುರಾವೆಗಳು ಇದ್ದಾಗ್ಯೂ, ಅವರನ್ನು ಬಿಡುಗಡೆ ಮಾಡುವಂತೆ ಆದೇಶ ನೀಡಿದರು. ಅವರೆಲ್ಲರಿಗೂ ಸೆಶನ್ಸ್ ಕೋರ್ಟು ಅಪರಾಧಿಗಳೆಂದು ಜೀವಾವಧಿ ಶಿಕ್ಷೆಗೆ ಗುರಿಪಡಿಸಿದ್ದಿತು.

ಇವೆಲ್ಲವೂ ಜಸ್ಟಿಸ್ ವರ್ಮಾ ಅವರು ಕುಂದಾ ತಿನ್ನದೇ ಸುಮ್ಮನೆ ಆದೇಶ ಮಾಡಿದ್ದಾರೆ ಎಂದು ಹೇಳಬಹುದೆ ?

ಬಂಧನದ ಸುದ್ದಿ ಸುಳ್ಳು: ಬಬಲಾದಿಮಠದ ಶಿವರುದ್ರ ಮುತ್ಯಾ ಸ್ಪಷ್ಟನೆ

ಜಮಖಂಡಿ: ನಗರದ ಹೊಸ ಬಬಲಾದಿ ಮಠದ ಸದಾಶಿವ ಮುತ್ಯಾರವರ ಬಂಧನವಾಗಿದೆ ಎಂಬುದು ಸುಳ್ಳು ಸುದ್ದಿ ಎಂದು ಕಿರಿಯ ಸ್ವಾಮಿಜಿ ಶಿವರುದ್ರಯ್ಯ ಮುತ್ಯಾ ಹೇಳಿದರು.

ನಗರದ ರಮಾ ನಿವಾಸ ಸಭಾಭವನದಲ್ಲಿ ಜರುಗಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗೋಕಾಕ ಮಹಾಲಕ್ಷ್ಮೀ ಅರ್ಬನ ಕೋ–ಆಪರೇಟಿವ್ಹ ಬ್ಯಾಂಕಿನ ಅವ್ಯವಹಾರ ಪ್ರಕರಣಕ್ಕೂ ಶ್ರೀಮಠಕ್ಕೂ ಯಾವುದೇ ಸಂಭಂಧವಿಲ್ಲ. ಪ್ರಕರಣದ ಆರೋಪಿ ಸಾಗರ ಸಬಕಾಳೆ ಎಂಬುವವರ ಖಾತೆಯಿಂದ ಹಣ ವರ್ಗಾವಣೆ ಆದ ಬಗ್ಗೆ ತನಿಖೆ ನಡೆಯುತ್ತಿದ್ದು ಅದರ ಕುರಿತು ಶ್ರೀಗಳನ್ನು ವಿಚಾರಣೆಗೆ ಪೋಲಿಸರು ಗೋಕಾಕಕ್ಕೆ ಕರೆಸಿದ್ದಾರೆ. ಕಾನೂನಿನ ಪ್ರಕಾರ ತನಿಖೆಗೆ ಹಾಜರಾಗಿ ತನಿಖಾಧಿಕಾರಿಗಳಿಗೆ ವಿವರಣೆ ನೀಡಲಾಗಿದೆ. ಆದರೆ ಶ್ರೀಗಳ ಬಂಧನವಾಗಿದೆ ಎಂಬ ಸುಳ್ಳು ಸುದ್ದಿ ಹರಿದಾಡುತ್ತಿದೆ.

ಮಠದ ಭಕ್ತರು ಈ ಬಗ್ಗೆ ತಲೆಕೆಡಿಸಿಕೊಳ್ಳಬಾರದು ಎಂದರು.

ಸನ್ 2023 ರಲ್ಲಿ ಸಬಕಾಳೆ ಎಂಬುವರು ಮಠಕ್ಕೆ ಆಗಮಿಸಿ, ಮಠದ ಅಭಿವೃದ್ಧಿ ಹಾಗೂ ದಾಸೋಹಕ್ಕೆ ದೇಣಿಗೆ ನೀಡಿದ್ದು ಸತ್ಯವಿದೆ. ಅವರು ಹಂತ ಹಂತವಾಗಿ ಸುಮಾರು 26 ಲಕ್ಷ ರೂ. ಗಳನ್ನು ಸೊಸೈಟಿ ಮೂಲಕ ವರ್ಗಾವಣೆ ಮಾಡಿದ್ದು, ಅದರ ಕುರಿತು ತನಿಖಾಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ. ಯಾವುದೇ ಭಕ್ತರು ಮಠಕ್ಕೆ ದೇಣಿಗೆ ನೀಡಿದಾಗ, ಅದನ್ನು ಹೇಗೆ

ಸಂಪಾದಿಸಿದೆ ಎಂದು ಕೇಳುವ ಸಂಪ್ರದಾಯ ನಮ್ಮದಲ್ಲ. ಅನೇಕ ಭಕ್ತರು ಮಠಕ್ಕೆ ದೇಣಿಗೆ ನೀಡುತ್ತಾರೆ. ಅವರ ಬಗ್ಗೆ ವಿಚಾರಿಸುವುದು ಸಮಂಜಸವಲ್ಲ ಅಲ್ಲವೇ ಎಂದರು.

ಜಮಖಂಡಿಯ ಹೊಸ ಬಬಲಾದಿಮಠದ ಏಳಿಗೆ ಸಹಿಸದ ಕೆಲವರು ಹುನ್ನಾರ ನಡೆಸುತ್ತಿದ್ದು ಅಪಪ್ರಚಾರದಲ್ಲಿ ತೊಡಗಿದ್ದಾರೆ. ಕಳೆದ ಅನೇಕ ದಿನಗಳಿಂದ ಅವರ ಪ್ರಯತ್ನ ಸಫಲವಾಗಿಲ್ಲ. ಮಾರ್ಚ್ 21 ಹಾಗೂ 22 ರಂದು ಗೋಕಾಕ ಪೊಲೀಸರನ್ನು ಭೇಟಿಯಾಗಿ ವಿಚಾರಣೆ ಎದುರಿಸಿ ಸಮರ್ಪಕವಾಗಿ ಉತ್ತರ ನೀಡಿ ಬಂದಿದ್ದೇನೆ. ಮಠದ ಭಕ್ತರಿಗೆ ಅನುಕೂಲ ಕಲ್ಪಿಸಿಕೊಡುವದು, ಮಠದ ಅಭಿವೃದ್ಧಿ ಹಾಗೂ ಪ್ರತಿ ಸೋಮವಾರ ಮತ್ತು ಅಮಾವಾಸ್ಯೆ ದಿನ ಅನ್ನ ದಾಸೋಹ ನಡೆಸುತ್ತಿರುವುದಾಗಿ ಹೇಳಿದರು. ಸದಾಶಿವ ಮುತ್ಯಾ, ಚಿಕ್ಕಯ್ಯ ಮುತ್ಯಾ ಹಾಗೂ ಚಂದ್ರವ್ವತಾಯಿ ಆಶೀರ್ವಾದ ನಮ್ಮ ಮೇಲಿದೆ ಯಾವುದೇ ಹುನ್ನಾರಕ್ಕೆ ಭಯ ಪಡುವದಿಲ್ಲ ಎಂದು ನುಡಿದರು.

ಪತ್ರಿಕಾಗೋಷ್ಠಿಯಲ್ಲಿ ಹೊಸ ಬಬಲಾದಿ ಮಠದ ಪೀಠಾಧಿಪತಿಗಳಾದ ಸದಾಶಿವ ಮುತ್ಯಾ, ಸೂರ್ಯಕಿರಣ ಹಿರೇಮಠ, ವೆಂಕಪ್ಪ ಕುಂದಗೋಳ, ಪ್ರಜ್ವಲ ಸೊನ್ನಹಳ್ಳಿ ಸಹಿತ ಹಲವರು ಉಪಸ್ಥಿತರಿದ್ದರು.

ಯತ್ನಾಳ ಉಚ್ಚಾಟನೆ: ಪುನರ್ ಪರಿಶೀಲಿಸಲಿ– ಸವದಿ

ರಬಕವಿ–ಬನಹಟ್ಟಿ : ಬಿಜೆಪಿ ಶಾಸಕ ಬಸನಗೌಡ ಯತ್ನಾಳರ ಉಚ್ಚಾಟನೆ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ತೇರದಾಳ ಶಾಸಕ ಸಿದ್ದು ಸವದಿ, ಯತ್ನಾಳರ ಉಚ್ಚಾಟನೆ ಬಗ್ಗೆ ಹೈಕಮಾಂಡ್ ಪುನರ್ ಪರಿಶೀಲಿಸಬೇಕು. ಉತ್ತರ ಕರ್ನಾಟಕದ ಪ್ರಭಾವಿ ನಾಯಕರಲ್ಲಿ ಒಬ್ಬರಾಗಿರುವ ಬಸನಗೌಡ ಯತ್ನಾಳರನ್ನು ಪಕ್ಷದಿಂದ ಉಚ್ಚಾಟನೆ ಮಾಡುವುದರೊಂದಿಗೆ ಸಾಕಷ್ಟು ಜನರು ನೊಂದಿದ್ದಾರೆ. ಪಕ್ಷಕ್ಕಾಗುವ ಹಾನಿ ಸೇರಿದಂತೆ ಎಲ್ಲ ದೃಷ್ಟಿಕೋನಗಳಿಂದಲೂ ಮತ್ತೊಮ್ಮೆ ಪರಿಶೀಲಿಸಿ ನಿರ್ಧಾರ ಕೈಗೊಳ್ಳುವುದು ಸೂಕ್ತವೆಂದು ಶಾಸಕ ಸಿದ್ದು ಸವದಿ ಹೇಳಿದರು.

ಇಂದಿನಿಂದ ಅರಭಾವಿ ದುರದುಂಡೀಶ್ವರ ಜಾತ್ರೆ

ಮೂಡಲಗಿ : ತಾಲ್ಲೂಕಿನ ಅರಭಾವಿಯ ಜಗದ್ಗುರು ದುರದುಂಡೀಶ್ವರ ಮಠದ ಜಾತ್ರೆಯು ಪೀಠಾಧಿಪತಿ ಗುರುಬಸವಲಿಂಗ ಸ್ವಾಮಿಗಳ ಸಾನಿಧ್ಯದಲ್ಲಿ ಮಾರ್ಚ 29 ರಿಂದ ಏಪ್ರಿಲ್ 1 ರವರೆಗೆ ಜರುಗಲಿದೆ.

ಮಾರ್ಚ್ 29 ರಂದು ಸಂಜೆ 6 ಕ್ಕೆ ಹುಕ್ಕೇರಿಯ ವಿರಕ್ತಮಠದ ಶಿವಬಸವ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಶಿವಾನುಭವ ಕಾರ್ಯಕ್ರಮ ಇರುವುದು. ಸಾಹಿತಿ ಸಂತೋಷ ಚಿನಗುಡಿ ಅವರು 'ವಚನ ಮತ್ತು ಪ್ರಮಾಣ ವಚನ : ಆಧುನಿಕ ಜೀವನ ಮತ್ತು ಅನುಷ್ಠಾನ" ಕುರಿತು ಉಪನ್ಯಾಸ ನೀಡುವರು.

ಮಾರ್ಚ 30 ರಂದು ಬೆಳಿಗ್ಗೆ 8 ಕ್ಕೆ ಷಟ್ಸ್ಥಲ ಧ್ವಜಾರೋಹಣ ಹಾಗೂ ಯುಗಾದಿ ಪಾಡ್ಯೆ ಪಂಚಾಂಗ ಶ್ರವಣ.ಬೆಳಿಗ್ಗೆ ಕ್ಕೆಗುಡಗುಂಟಿಯ ಸದಾನಂದ ಶಿವಾಚಾರ್ಯರಿಂದ ಅಯ್ಯಾಚಾರ ದೀಕ್ಷಾ ಕಾರ್ಯಕ್ರಮ. ಮಧ್ಯಾಹ್ನ 12 ಕ್ಕೆ ಪಾದ ಪೂಜೆ, ಮಹಾಪ್ರಸಾದ ಇರುವುದು.

ಸಂಜೆ 6–30 ಕ್ಕೆ ಡಂಬಳ ಗದಗದ ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ಸಾನಿಧ್ಯ ಮತ್ತು ಬೆಳಗಾವಿಯ ಡಾ. ಅಲ್ಲಮಪ್ರಭು ಸ್ವಾಮೀಜಿಗಳ ಸಮ್ಮುಖದಲ್ಲಿ ಸನ್ಮಾನ ಕಾರ್ಯಕ್ರಮ ಇರುವುದು. ಮುಖ್ಯ ಅತಿಥಿಗಳಾಗಿ ಸಂಸದ ಜಗದೀಶ ಶೆಟ್ಟರ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಭಾಗವಹಿಸುವರು. ರಾಜ್ಯ ಪ್ರಶಸ್ತಿ ಪುರಸ್ಕೃತ ಆಶು ಕವಿ ಸಿದ್ದಪ್ಪ ಬಿದರಿ ಅವರಿಗೆ ಸನ್ಮಾನ.

ಮಾ. 31 ರಂದು ಬೆಳಿಗ್ಗೆ 6 ಕ್ಕೆ ದುರದುಂಡೀಶ್ವರ ಗದ್ದುಗೆಗೆ ಮಹಾ ರುದ್ರಾಭಿಷೇಕ, ಬೆಳಿಗ್ಗೆ 11 ಕ್ಕೆ ಪಲ್ಲಕ್ಕಿ ಉತ್ಸವ ಜರುಗಲಿದೆ. ಮಧ್ಯಾಹ್ನ 1 ಕ್ಕೆ ಮಹಾಪ್ರಸಾದ ಇರುವುದು. ಸಂಜೆ 6 ಕ್ಕೆ ಧರ್ಮ ಚಿಂತನ ಗೋಷ್ಠಿ ಇರುವುದು. ಕಡಕೋಳದ ಸಚ್ಚಿದಾನಂದ ಸ್ವಾಮೀಜಿ, ಹಂದಿಗುಂದ ಅಡಿ ಶಿವಾನಂದ ಸ್ವಾಮೀಜಿ, ಶೇಗುಣಶಿಯ ಡಾ.ಮಹಾಂತ ಸ್ವಾಮೀಜಿಯವರ ಸಾನಿಧ್ಯ ಇರುವುದು. ಮುಖ್ಯ ಅತಿಥಿಗಳಾಗಿ ಸಚಿವ ಸತೀಶ ಜಾರಕಿಹೊಳಿ, ಶಾಸಕ ಬಾಲಚಂದ್ರ ಜಾರಕಿಹೊಳಿ ಭಾಗವಹಿಸುವರು. ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅವರಿಗೆ ಸನ್ಮಾನ ಇರುವುದು. ಮಠದ ಸದ್ಭಕ್ತರಿಗೆ ಸನ್ಮಾನ. ರಾತ್ರಿ 10–30 ಕ್ಕೆ ರಸಮಂಜರಿ. ಎಪ್ರಿಲ್ 1 ರಂದು ಮಧ್ಯಾಹ್ನ 12 ಕ್ಕೆ ಪಾದ ಪೂಜೆ, ಮಹಾಪ್ರಸಾದ ಮತ್ತು ಸಂಜೆ 5 ಕ್ಕೆ ಜಂಗಿ ನಿಕಾಲಿ ಕುಸ್ತಿ ಜರುಗುವವು.

ಮಹಾಲಿಂಗಪುರ : ಬಿಬಿಎ ವಿಭಾಗದಲ್ಲಿ ಚೆನ್ನಮ್ಮ ವಿವಿಗೆ ಪ್ರಥಮ ಸ್ಥಾನ ಪಡೆದ ಪಟ್ಟಣದ ಕುಮಾರಿ ಜಬೀನಾ ರಮ್ಜಾನಸಾಬ ಫಣಿಬಂಧ ಈಕೆಯನ್ನು ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಸನ್ಮಾನಿಸಿದರು. ನಜಿರ ಝಾರೆ, ಸಜನಸಾಬ ಪೆಂಡಾರಿ, ಅಶೋಕ್ ಸೊನ್ನದ, ಪೈಗಂಬರ ಪೆಂಡಾರಿ ಸೇರಿದಂತೆ ಇನ್ನೂ ಹಲವರು ಹಾಜರಿದ್ದರು.

ವಿಶ್ವ ರಂಗಭೂಮಿ ದಿನ ಆಚರಣೆ



ಬೆಳಗಾವಿ : ನಗರದ ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು, ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ ಬೆಳಗಾವಿ ಇವರ ಸಂಯುಕ್ತಾಶ್ರಯದಲ್ಲಿ, ವಿಶ್ವ ರಂಗಭೂಮಿ ದಿನಾಚರಣೆ 2025ನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಕಾರ್ಯಕ್ರಮವನ್ನು, ನಾಡಗೀತೆ ಯೊಂದಿಗೆ ಪ್ರಾರಂಭಿಸಿ, ಬೆಳಗಾವಿಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕರಾದ ಶ್ರೀಮತಿ ವಿದ್ಯಾವತಿ ಭಜಂತ್ರಿಯವರು ಉದ್ಘಾಟಿಸಿ ಮಾತನಾಡಿದ ಅವರು ಕಲೆಯು ಜೀವನವನ್ನು ಹೊರತಾಗಿ ಇರುವುದಿಲ್ಲ ಜೀವನವೇ ಕಳೆಯಾಗಿರುತ್ತದೆ. ಪ್ರತಿಯೊಬ್ಬರು ತಮ್ಮದೇ ಆದ ಕಲೆಯನ್ನ ಹೊಂದಿರುತ್ತಾರೆ ಅದನ್ನ ಗುರುತಿಸಬೇಕು. ವಿಶ್ವ ರಂಗಭೂಮಿ ದಿನಾಚರಣ